ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 6 । ಸಂಚಿಕೆ : 9 । ಸೆಪ್ಟೆಂಬರ್ - 2024 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ







**ನಾಡಿನ ಸಮಸ್ತ ಜನತೆಗೆ**

**ಗೌರಿ-ಗಣೇಶ ಚತುರ್ಥಿಯ ಶುಭಾಶಯಗಳು**

**ವಿ. ರಾಜು,**
**ಅಧ್ಯಕ್ಷರು**




ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

**ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ,**
**ಉಪಾಧ್ಯಕ್ಷರು**




## ಶಿವಮೊಗ್ಗದಲ್ಲಿ ಡಿ. ದೇವರಾಜ ಅರಸು ಜಯಂತಿ ಮತ್ತು ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಣೆ

# ಅಭಿನಂದನೆ ಸಲ್ಲಿಕೆ





ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಶೇಖರಗೌಡ ಮಾಲಿಪಾಟೀಲರವರು ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾಗಿ ಹಾಗೂ ಶ್ರೀ ಬಿ.ಡಿ.ಭೂಕಾಂತರವರು ನ್ಯಾಷನಲ್ ಫಿಲಂ ಅಂಡ್ ಆರ್ಟ್ಸ್ ಕೋ-ಆಪರೇಟಿವ್ ಫೆಡರೇಷನ್, ದೆಹಲಿ ಇದರ ನಿರ್ದೇಶಕರಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಆಡಳಿತಮಂಡಳಿ ಸಭೆಯಲ್ಲಿ ಗೌರವಿಸಿ ಸನ್ಮಾನಿಸಲಾಯಿತು.



ಶ್ರೀ ಗಾಯತ್ರಿ ಪತ್ತಿನ ಸಹಕಾರ ಸಂಘ ನಿ, ಸೂಳೆಭಾವಿ ಇದರ ಗುಳೇದಗುಡ್ಡ ಶಾಖೆಯ ಸ್ವಂತ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಶ್ರೀ ಶ್ರೀ ಶ್ರೀ 1008 ಜಗದ್ಗುರು ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳು ಶ್ರೀ ಜಗದ್ಗುರು ಗುರುಸಿದ್ದೇಶ್ವರ ಬೃಹನ್ಮಠ, ಗುಳೇದಗುಡ್ಡ ಶ್ರೀಗಳ ದಿವ್ಯ ಸಾನಿಧ್ಯದಲ್ಲಿ, ನೂತನ ಕಟ್ಟಡದ ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ ಅಜಯಕುಮಾರ ಸರನಾಯಕ ಮಾನ್ಯ ಅಧ್ಯಕ್ಷರು ಬಿಡಿಸಿಸಿ ಬ್ಯಾಂಕ ಬಾಗಲಕೋಟ ಇವರು ನೆರವೇರಿಸಿದರು. ಸಂಘದ ಅಧ್ಯಕ್ಷರು ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿರವರು ಆಡಳಿತಮಂಡಳಿ ಸದಸ್ಯರು ಮತ್ತು ಗಣ್ಯರು ಉಪಸ್ಥಿತರಿದ್ದರು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ



ಶಿದ್ದನಗೌಡ ಸಂಣರಾಮನಗೌಡ ಪಾಟೀಲ

ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಶ್ರೀ ವಿ. ರಾಜು

ಅಧ್ಯಕ್ಷರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ

ಉಪಾಧ್ಯಕ್ಷರು



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ

ನಿರ್ದೇಶಕರು



ಶ್ರೀ ಸಿ.ಎಂ. ಮಾರೇಗೌಡ

ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ

ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ

ನಿರ್ದೇಶಕರು



ಶ್ರೀ ಎಂ.ಜೆ. ನರೇಂದ್ರ ಕುಮಾರ

ನಿರ್ದೇಶಕರು



ಶ್ರೀ ಡಿ. ಚನ್ನಯ್ಯ

ನಿರ್ದೇಶಕರು



ಶ್ರೀ ಕೆ. ಕೃಷ್ಣಮೂರ್ತಿ

ನಿರ್ದೇಶಕರು



ಶ್ರೀ ಜಿ. ಮಲ್ಲಿಕಾರ್ಜುನಯ್ಯ

ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ

ನಿರ್ದೇಶಕರು



ಶ್ರೀ ಧರೇಪ್ಪ ಎಂ. ಆಲಗೂರ

ನಿರ್ದೇಶಕರು



ಶ್ರೀ ಗುರುಪಾದಪ್ಪಗೌಡ ಬ. ಪಾಟೀಲ

ನಿರ್ದೇಶಕರು



ಶ್ರೀ ಹೊನ್ನಯ್ಯ ವಿ. ಹಿರೇಮಠ

ನಿರ್ದೇಶಕರು



ಶ್ರೀ ಪಿ.ಕೆ. ಜಯಕೃಷ್ಣೇಗೌಡ

ನಿರ್ದೇಶಕರು



ಶ್ರೀ ಶೇಖರಗೌಡ ಮಾಲಿ ಪಾಟೀಲ

ನಿರ್ದೇಶಕರು



ಶ್ರೀ ಡಿ.ಆರ್. ನಾಗೇಶಪ್ಪ

ನಿರ್ದೇಶಕರು



ಶ್ರೀ ಉಮೇಶ ಶಿ ಬಾಳಿ

ನಿರ್ದೇಶಕರು



ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ

ನಿರ್ದೇಶಕರು



ಶ್ರೀ ಚಿತ್ತರಂಜನ್ ಬೋಳಾರ್


ನಿರ್ದೇಶಕರು



ಶ್ರೀ ಪ್ರಜ್ವಲ್ ಕೆ.ಎನ್.

ಮುಖ್ಯಕಾರ್ಯನಿರ್ವಹಣಾಧಿಕಾರಿ

**SAHAKARA VARTHA PATHRIKE KANNADA MONTHLY**
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2022-2024




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



**ವಿ. ರಾಜು**

**ಅಧ್ಯಕ್ಷರು**

**ಸಹಕಾರ ಸಂಘಗಳು ಎಲ್ಲಾ ವಲಯಗಳನ್ನು ವ್ಯಾಪಿಸಿದ್ದು ಸದಸ್ಯ ಸೇವೆಗಳು ಮತ್ತಷ್ಟು ಕ್ರಿಯಾಶೀಲವಾಗಲಿದೆ ಸಹಕಾರ ಚಳುವಳಿ, ಬಲಯುತವಾಗಬೇಕಾದರೆ ಸಕ್ರಿಯ ಸದಸ್ಯರ ಸಂಖ್ಯೆ ಹೆಚ್ಚಾಗಬೇಕು ಯುವಜನರಲ್ಲಿ ಸಹಕಾರ ಕುರಿತು ಅರಿವು ಮೂಡಿಸಿ ಅವರನ್ನು ಸಹಕಾರ ಕಕ್ಷೆಗೆ ಬರುವಂತೆ ಉತ್ತೇಜಿಸಬೇಕಾಗಿದೆ. ಇದರಿಂದ ಮುಂಬರುವ ದಿನಗಳಲ್ಲಿ ಯುವ ನಾಯಕತ್ವಕ್ಕೂ ಪ್ರೋತ್ಸಾಹ ನೀಡಿದಂತಾಗುತ್ತದೆ.**

# ವಾರ್ಷಿಕ ಮಹಾಸಭೆ : ಸಂಘಗಳ ಕೈಗನ್ನಡಿ

ಪ್ರತಿ ವರ್ಷ ಸೆಪ್ಟೆಂಬರ್ 25ರ ಒಳಗಾಗಿ ಎಲ್ಲಾ ರೀತಿಯ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಗಳು ಪೂರ್ಣಗೊಳ್ಳಲಿವೆ. ಕಳೆದ ವರ್ಷದ ಸಂಘದ ಸಾಧನೆಗಳು ವಾರ್ಷಿಕ ಮಹಾಸಭೆಗಳಲ್ಲಿ ಪ್ರಮುಖ ವಿಷಯಗಳಾಗಲಿವೆ. ಸಾಧನೆ ವೈಫಲ್ಯಗಳ ಪರಾಮರ್ಶೆಯಾಗಲಿದ್ದು ಮುಂದಿನ ವರ್ಷದ ಯೋಜನೆಗಳ ಬಗ್ಗೆಯೂ ಸಲಹೆ, ಸೂಚನೆ, ಗುರಿಗಳ ಬಗ್ಗೆ ಸುದೀರ್ಘ ಚರ್ಚೆಗಳು ನಡೆಯಲಿದೆ.

ಒಟ್ಟಾರೆ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಗಳು ಆ ಸಂಘಗಳ ಕೈಗನ್ನಡಿಯಾಗಲಿವೆ ಎನ್ನಬಹುದಾಗಿದೆ. ಸಹಕಾರ ಸಂಘಗಳು ಸೇವೆಯ ಜೊತೆಗೆ ಹೆಚ್ಚು ಲಾಭಗಳಿಸುವುದು ಇಂದಿನ ಸ್ಪರ್ಧಾತ್ಮಕ ಪರಿಸ್ಥಿತಿಯಲ್ಲಿ ಅವುಗಳ ಸಾಮರ್ಥ್ಯವನ್ನು ಬಿಂಬಿಸುತ್ತದೆ.

ಈ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯಾಗಿದೆ. ಬಹುತೇಕ ಜಲಾಶಯಗಳು ಭರ್ತಿಯಾಗಿವೆ. ಕಡಿಮೆ ಮಳೆಯಾದಂತಹ ಪ್ರದೇಶಗಳು ಇವೆ. ಸಹಕಾರ ಸಂಘಗಳು ಎಲ್ಲಾ ವಲಯಗಳನ್ನು ವ್ಯಾಪಿಸಿದ್ದು ಸದಸ್ಯ ಸೇವೆಗಳು ಮತ್ತಷ್ಟು ಕ್ರಿಯಾಶೀಲವಾಗಲಿದೆ.

ಸಹಕಾರ ಚಳುವಳಿ, ಬಲಯುತವಾಗಬೇಕಾದರೆ ಸಕ್ರಿಯ ಸದಸ್ಯರ ಸಂಖ್ಯೆ ಹೆಚ್ಚಾಗಬೇಕು. ಯುವಜನರಲ್ಲಿ ಸಹಕಾರ ಕುರಿತು ಅರಿವು ಮೂಡಿಸಿ ಅವರನ್ನು ಸಹಕಾರ ಕಕ್ಷೆಗೆ ಬರುವಂತೆ ಉತ್ತೇಜಿಸಬೇಕಾಗಿದೆ. ಇದರಿಂದ ಮುಂಬರುವ ದಿನಗಳಲ್ಲಿ ಯುವ ನಾಯಕತ್ವಕ್ಕೂ ಪ್ರೋತ್ಸಾಹ ನೀಡಿದಂತಾಗುತ್ತದೆ.

ಭಾರತದ ಆರ್ಥಿಕತೆಯನ್ನು ಅವಲೋಕಿಸಿದಾಗ ದೇಶದ ಸಹಕಾರ ಚಳುವಳಿ ಸದಸ್ಯತ್ವದಲ್ಲಿ ಪ್ರಥಮ ಸ್ಥಾನದಲ್ಲಿದೆ. ಆದರೂ ಸದಸ್ಯ ಭಾಗವಹಿಸುವಿಕೆ ಪ್ರಮಾಣ ಹೆಚ್ಚಾದರೆ ಸಂಘಗಳು ಆರ್ಥಿಕವಾಗಿ ಮತ್ತಷ್ಟು ಬಲಗೊಳ್ಳುವ ನಿರೀಕ್ಷೆ ಇದೆ. ಸಹಕಾರಿಗಳು, ಸಹಕಾರ ಸಂಘಗಳ ಸಿಬ್ಬಂದಿಗಳು ತಮ್ಮ ಬದ್ಧತೆ ದಕ್ಷತೆಯನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಅಗತ್ಯವಿದೆ.

**ಸಮಸ್ತ ಜನತೆಗೆ ಗೌರಿ-ಗಣೇಶ ಹಬ್ಬದ ಶುಭಾಶಯಗಳು**

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀ ವಿ. ರಾಜು**
ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**
ಸದಸ್ಯರು : **ಡಾ|| ಸಂಜಯ ಪಿ. ಹೊಸಮಠ**
**ಶ್ರೀ ಎಂ.ಜೆ. ನರೇಂದ್ರಕುಮಾರ**
**ಶ್ರೀ ಕೆ. ಕೃಷ್ಣಮೂರ್ತಿ**
**ಶ್ರೀ ಡಿ.ಆರ್. ನಾಗೇಶಪ್ಪ**
**ಶ್ರೀ ಹೊನ್ನಯ್ಯ ವೀ ಹಿರೇಮಠ**
**ಶ್ರೀ ಚಿತ್ತರಂಜನ್ ಬೋಳಾರ್**
ಸಂಪಾದಕರು :
**ಪ್ರಜ್ವಲ್ ಕೆ.ಎನ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ

# 2023-24ನೇ ಸಾಲಿನ 20ನೇ ವಾರ್ಷಿಕ ಸಾಮಾನ್ಯ ಸಭೆ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ, ಬೆಂಗಳೂರು ನಂ.126, 1ನೇ ಮುಖ್ಯರಸ್ತೆ, ಜೆ.ಬಿ.ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096 ಇದರ 2023–24ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ:19.09.2024 ಗುರುವಾರ ಬೆಳಿಗ್ಗೆ 11:00 ಘಂಟೆಗೆ ಅಧ್ಯಕ್ಷರಾದ ಶ್ರೀ ವಿ.ರಾಜು ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ. ಈ ಬಗ್ಗೆ ಮಾನ್ಯ **ಅಜೀವ ಸದಸ್ಯ ಸಹಕಾರ ಸಂಘಗಳಿಗೆ** ಈಗಾಗಲೇ ನೋಟೀಸನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ವಾರ್ಷಿಕ ಸಾಮಾನ್ಯ ಸಭೆಗೆ ಬರುವಾಗ ಮಾನ್ಯ ಸದಸ್ಯ ಪ್ರತಿನಿಧಿಗಳು ನಮೂನೆ "ಎ"ನಲ್ಲಿ ತಿಳಿಸಿರುವ ಮಾಹಿತಿಯನ್ನು ವಿಶೇಷ ಸೂಚನೆಯಂತೆ ಎಲ್ಲಾ ಕಾಲಂಗಳನ್ನು ತುಂಬಿ ಸದರಿ ನಮೂನೆಯನ್ನು ಸಂಘದ ಲೆಟರ್‌ಹೆಡ್‌ನಲ್ಲಿ ದೃಢೀಕರಿಸಿ, ಲಗತ್ತಿನೊಂದಿಗೆ ಹಾಜರಾಗಲು ಕೋರಿದೆ.

**ಸ್ಥಳ:**
**ಕೆ.ಇ.ಬಿ ಇಂಜಿನಿಯರ್ಸ್ ಅಸೋಸಿಯೇಷನ್, ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣ,**
**ಸಿಲ್ವರ್ ಜುಬಿಲಿ ಬಿಲ್ಡಿಂಗ್, ನಂ.28, ರೇಸ್‌ಕೋರ್ಸ್ ಕ್ರಾಸ್ ರಸ್ತೆ,**
**ಆನಂದರಾವ್ ಸರ್ಕಲ್ ಹತ್ತಿರ, ಬೆಂಗಳೂರು–560009**

ಪ್ರಜ್ವಲ್ ಕೆ.ಎನ್
ಮುಖ್ಯಕಾರ್ಯನಿರ್ವಹಣಾಧಿಕಾರಿ

**ಸುಭಾಷಿತ :** ನನ್ನ ಮಾತೃ ಭಾಷೆಯಿಂದ ಪಡೆದ ವಿದ್ಯೆ, ಚಾತುರ್ಯವೇ ಶ್ರೇಷ್ಠವಾದದ್ದು, ಪರರ ನಾಲಿಗೆಯ ಎಂಜಲು ನನಗೆ ಸವಿಯಾದೀತೇ? ರಾಷ್ಟ್ರಕವಿ ಗೋವಿಂದ ಪೈ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# 78ನೇ ಸ್ವಾತಂತ್ರ್ಯ ದಿನಾಚರಣೆ – 2024

# ವಿಕಸಿತ ಭಾರತ 2047 ಗುರಿ–ಪ್ರಧಾನಿ ನರೇಂದ್ರ ಮೋದಿ

**ಹೊಸದಿಲ್ಲಿ :** ಪ್ರಧಾನಿ ನರೇಂದ್ರ ಮೋದಿ ಅವರು ಸತತ 11ನೇ ಬಾರಿ ಹಾಗೂ ತಮ್ಮ ಐತಿಹಾಸಿಕ ಮೂರನೇ ಅವಧಿಯ ಮೊದಲ ಬಾರಿ, ಸ್ವಾತಂತ್ರ್ಯ ದಿನದ ಅಂಗವಾಗಿ ದಿಲ್ಲಿಯ ಕೆಂಪುಕೋಟೆಯಲ್ಲಿ ಆಗಸ್ಟ್ 15 ರಂದು ಧ್ವಜಾರೋಹಣ ನೆರವೇರಿಸಿದರು. 'ವಿಕಸಿತ ಭಾರತ @2047' ಥೀಮ್ ಅಡಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇದಕ್ಕೆ ಪೂರಕವಾಗಿ ಪ್ರಧಾನಿ ಮೋದಿ ಭಾಷಣ ಮಾಡಿದರು. ಅವರ ಭಾಷಣದ ಪ್ರಮುಖ ಅಂಶಗಳು ಇಲ್ಲಿವೆ.

ದೇಶಕ್ಕಾಗಿತ್ಯಾಗ, ಬಲಿದಾನ ಮಾಡಿದ ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರಿಗೆ ವಂದನೆ ಸಲ್ಲಿಸುವ ದಿನ ಇಂದು. ಕಳೆದ ಕೆಲವು ವರ್ಷಗಳಿಂದ ನೈಸರ್ಗಿಕ ವಿಕೋಪಗಳು ನಮ್ಮ ಕಳವಳಗಳನ್ನು ಹೆಚ್ಚಿಸಿವೆ. ಇದರಿಂದ ಹಾನಿಗೊಳಗಾದ ಕುಟುಂಬಗಳಿಗೆ ನನ್ನ ಸಂತಾಪಗಳನ್ನು ಸೂಚಿಸುತ್ತೇನೆ. ನೈಸರ್ಗಿಕ ವಿಕೋಪಗಳಿಂದಾಗಿ ನಮ್ಮ ಆತಂಕ ಹೆಚ್ಚುತ್ತಿದೆ. ಅನೇಕ ಜನರು ಇದರಿಂದ ತಮ್ಮ ಕುಟುಂಬಗಳು, ಆಸ್ತಿಗಳನ್ನು ಕಳೆದುಕೊಂಡಿದ್ದಾರೆ. ದೇಶ ಕೂಡ ನಷ್ಟಗಳನ್ನು ಅನುಭವಿಸಿದೆ. ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಈ ದೇಶ ಅವರ ಜತೆಗೆ ಇದೆ ಎಂದು ನಾನು ಅವರಿಗೆ ಭರವಸೆ ನೀಡುತ್ತೇನೆ ಎಂದರು.



# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಕಛೇರಿಯಲ್ಲಿ ಸ್ವಾತಂತ್ರ್ಯೋತ್ಸವದ ಆಚರಣೆ



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳದ ಕಛೇರಿಯಲ್ಲಿ 78ನೇ ಸ್ವಾತಂತ್ರ್ಯೋತ್ಸವದ ದಿನಾಚರಣೆಯನ್ನು ಆಚರಿಸಲಾಯಿತು. ಅಧ್ಯಕ್ಷರಾದ ಶ್ರೀ ವಿ. ರಾಜು ರವರು ಧ್ವಜಾರೋಹಣ ನೆರವೇರಿಸಿದರು. ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರಪ್ರಸಾದ್‌ಗೌಡರವರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪ್ರಜ್ವಲ್ ಕೆ.ಎನ್. ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.

# 78ನೇ ಸ್ವಾತಂತ್ರ್ಯ ದಿನಾಚರಣೆ : ಅಭಿವೃದ್ಧಿಗೆ ಒತ್ತು, ಉದ್ಯೋಗಸೃಷ್ಟಿಗೆ ಆದ್ಯತೆ, ಆದಾಯ ಹೆಚ್ಚಳ ಪರಿಕಲ್ಪನೆಗೆ ರಾಜ್ಯದಿಂದ ಅತಿದೊಡ್ಡ ಕೊಡುಗೆ – ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಂಗಳೂರು :** ಚುನಾವಣೆಯಲ್ಲಿ ನೀಡಿದ ಭರವಸೆಯಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ನಾಡಿನ ಸಮಸ್ತ ಜನರ ಬದುಕಿಗೆ ಆರ್ಥಿಕ ಭದ್ರತೆ ತರುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಆರ್ಥಿಕ ನೆರವು ನೀಡುವ ಜಾಗತಿಕ ಮೂಲ ಆದಾಯ (ಯುನಿವರ್ಸಲ್ ಬೇಸಿಕ್ ಇನ್‌ಕಮ್) ಪರಿಕಲ್ಪನೆಯನ್ನು ಅತಿದೊಡ್ಡ ಪ್ರಮಾಣದಲ್ಲಿ ಸಾಕಾರಗೊಳಿಸುತ್ತಿರುವ ರಾಜ್ಯ ಕರ್ನಾಟಕ ಎಂಬುದು ಹೆಮ್ಮೆಯ ವಿಷಯವಾಗಿದೆ. ಈ ಯೋಜನೆಗಳು ಮುಂದುವರಿಯಲಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಕರ್ನಾಟಕ ಸರ್ಕಾರ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು ನಗರ ಜಿಲ್ಲಾಡಳಿತ ಸಹಯೋಗದಲ್ಲಿ ಆಯೋಜಿಸಲಾಗಿದ್ದ 78ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ,ಗೌರವ ರಕ್ಷೆ ಸ್ವೀಕರಿಸಿ ಅವರು ಮಾತನಾಡಿದರು.

ಗೃಹಲಕ್ಷ್ಮಿ, ಶಕ್ತಿ, ಗೃಹಜ್ಯೋತಿ, ಅನ್ನಭಾಗ್ಯ ಮತ್ತು ಯುವನಿಧಿ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ಭವಿಷ್ಯ ನುಡಿಯುತ್ತಿರುವವರಿಗೆ ರಾಜ್ಯದಲ್ಲಿ ಆರ್ಥಿಕ ಪ್ರಗತಿ ಪ್ರಗತಿ ಸಾಧಿಸಿ ತೋರಿಸುವ ಮೂಲಕ ನಾವು ಉತ್ತರ ನೀಡಲಿದ್ದೇವೆ. ಹೊಸ ಅವಿಷ್ಕಾರಗಳನ್ನು ನಡೆಸಿ ಅವು ಫಲಾನುಭವಿಗಳಿಗೆ ಇನ್ನಷ್ಟು ಹೆಚ್ಚು ನೆರವಾಗುವ ರೀತಿಯ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಉದ್ಯುಕ್ತವಾಗಿದೆ ಎಂದರು.


ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎರಡು ಮುಂಗಾರು ಹಂಗಾಮುಗಳಲ್ಲಿ ರಾಜ್ಯ ಸಂಪೂರ್ಣ ವಿಭಿನ್ನ ಪರಿಸ್ಥಿತಿಯನ್ನು ಎದುರಿಸಿದೆ. ಕಳೆದ ವರ್ಷ ರಾಜ್ಯ ತೀವ್ರ ಬರಗಾಲಕ್ಕೆ ತುತ್ತಾಗಿದ್ದರೆ,ಈ ಬಾರಿ ಅತಿವೃಷ್ಟಿಗೆ ಒಳಗಾಗಿದೆ. ಕೇಂದ್ರ ಸರ್ಕಾರ ಬರಪರಿಹಾರ ಮೊತ್ತವನ್ನು ತಡವಾಗಿ ನೀಡಿದರೂ ಸಹ ರಾಜ್ಯದಲ್ಲಿ ಬರದಿಂದ ಜನರಿಗೆ ಹೆಚ್ಚು ಅನಾನುಕೂಲಗಳು ಆಗದಂತೆ ಮುನ್ನೆಚ್ಚರಿಕೆ ವಹಿಸಲಾಯಿತು. ಪ್ರಸಕ್ತ ಸಾಲಿನಲ್ಲಿ ಪ್ರವಾಹ ಪೀಡಿತ ಜಿಲ್ಲೆಗಳಿಗೆ ಭೇಟಿ ನೀಡಲಾಗಿದೆ. ಜೀವಹಾನಿ, ಜಾನುವಾರುಗಳ ಸಾವು ಹಾಗೂ ಮನೆ ಹಾನಿಗಳಿಗೆ ತ್ವರಿತವಾಗಿ ಪರಿಹಾರ ಒದಗಿಸುವಂತೆ ಸೂಚಿಸಲಾಗಿದೆ.




ಮನೆ ಕಳೆದುಕೊಂಡವರಿಗೆ 1.2 ಲಕ್ಷ ರೂ. ಪರಿಹಾರದೊಂದಿಗೆ ಮನೆ ಹಂಚಿಕೆ ಮಾಡಲು ಕ್ರಮವಹಿಸಲಾಗಿದೆ. ಅಭಿವೃದ್ಧಿ ಮತ್ತು ಪರಿಸರದ ನಡುವೆ ಸಮತೋಲನ ಸಾಧಿಸುವುದು ಅತ್ಯಗತ್ಯ ಎಂಬ ಪ್ರಕೃತಿಯ ಎಚ್ಚರಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದರು.

ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಪ್ರಸಕ್ತ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಮೂಲಕ 5 ಸಾವಿರ ಕೋಟಿ ರೂ. ವೆಚ್ಚದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಬಸವಾದಿ ಶರಣರು ಪ್ರತಿಪಾದಿಸಿದ ಕಾಯಕ, ದಾಸೋಹ ಮತ್ತು ಸಮ ಸಮಾಜ ನಿರ್ಮಾಣದ ತತ್ವಗಳು ಸಂವಿಧಾನದ ಮೂಲಭೂತ ಆಶಯಗಳಾಗಿವೆ.ಈ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸಮಾನತೆಗೆ ವಿಶೇಷ ಆದ್ಯತೆ ನೀಡಿ ರಾಜ್ಯದ ಸರ್ವತೋಮುಖ ಬೆಳವಣಿಗೆಗೆ ಸರ್ಕಾರದ ಆದ್ಯತೆ ನೀಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

# ದುರ್ಗಿಗುಡಿ ಕೋ-ಆಪರೇಟಿವ್ ಸೊಸೈಟಿ - ವಜ್ರ ಮಹೋತ್ಸವ
# ಸಹಕಾರಿ ಕ್ಷೇತ್ರವನ್ನು ಬಲಪಡಿಸಲು ಬಿ.ವೈ. ರಾಘವೇಂದ್ರ ಕರೆ




**ಶಿವಮೊಗ್ಗ** : ಸಹಕಾರಿ ಕ್ಷೇತ್ರವನ್ನು ಭ್ರಷ್ಟಾಚಾರ ಮುಕ್ತವಾಗಿ ಮಾಡಿದಾಗ ಮಾತ್ರ ಪ್ರಗತಿ ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಸಹಕಾರಿಯು ಕೂಡ ಯೋಚಿಸಿ ಕೆಲಸ ಮಾಡುವಂತೆ ಸಂಸದ ಬಿ.ವೈ. ರಾಘವೇಂದ್ರ ಕರೆ ನೀಡಿದರು.

ಶಿವಮೊಗ್ಗದ ದುರ್ಗಿಗುಡಿ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ವಜ್ರ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಸಹಕಾರ ಕ್ಷೇತ್ರ ಅತ್ಯಂತ ಬಲಿಷ್ಠವಾಗಿದೆ. ಆದರೆ ಕೆಲವರು ಅದನ್ನು ದುರ್ಬಲಗೊಳಿಸುತ್ತಿರುವುದರಿಂದ ಹಿನ್ನಡೆಯಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಹಕಾರ ಕ್ಷೇತ್ರವನ್ನು ಇನ್ನಷ್ಟು ಮುಂದೆ ಬರಲು ಪ್ರತ್ಯೇಕ ಇಲಾಖೆಯನ್ನು ಕೇಂದ್ರ ಸರ್ಕಾರ ಮಾಡಿದೆ. ಈ ಮೂಲಕ ಶಕ್ತಿ ತುಂಬುವ ಕೆಲಸವು ಆಗಿದೆ. ಜನರ ದುಡ್ಡು ದುರ್ಬಳಕೆಯಾಗದಂತೆ ನಡೆಯಲು ಎಲ್ಲಾ ಕ್ರಮಗಳನ್ನು ಕೇಂದ್ರದಿಂದ ಕೈಗೊಳ್ಳಲಾಗುತ್ತಿದೆ ಎಂದರು.

ಸ್ವಾತಂತ್ರ್ಯ ಬಂದು ಕೆಲವೇ ತಿಂಗಳಲ್ಲಿ ಸ್ಥಾಪನೆಯಾದ ಈ ಸಂಘ ಇಂದು ವಜ್ರ ಮಹೋತ್ಸವ ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ. ಸುದೀರ್ಘ ಯಶಸ್ವಿಯಾಗಿ ನಡೆದುಕೊಂಡು ಬರಲು ಹಿರಿಯರೇ ಹಾಕಿಕೊಟ್ಟ ಭದ್ರ ಬುನಾದಿ ಕಾರಣವಾಗಿದೆ. ಇದರ ಜೊತೆ ಸೊಸೈಟಿಯ ಎಲ್ಲರೂ ಸಹಕಾರ ನೀಡಿ ಸಾರ್ಥಕ ಗೊಳಿಸಿದ್ದಾರೆ ಎಂದು ಹೇಳಿದರು.

ಯಾವುದೇ ಕ್ಷೇತ್ರವನ್ನು ಸಹಕಾರಿ ವಲಯ ಬಿಟ್ಟಿಲ್ಲ ವೈದ್ಯಕೀಯ ಕ್ಷೇತ್ರ ಕೂಡ ಸಹಕಾರಿ ತತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ ಹೀಗಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಸಹಕಾರ ಬಲಗೊಳ್ಳಬೇಕಿದೆ ಎಂದು ಆಶಿಸಿದರು. ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಮಾತನಾಡಿ, ಸಾಮಾನ್ಯ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಇದನ್ನು ಬೆಳೆಸಿದರೆ ಎಲ್ಲರೂ ಕೂಡ ಆರ್ಥಿಕವಾಗಿ ಶಕ್ತರಾಗಬಹುದಾಗಿದೆ ಎಂದರು.

ಸೊಸೈಟಿಯ ಮಾಜಿ ಅಧ್ಯಕ್ಷ ಹಾಗೂ ಹಿರಿಯ ಸಹಕಾರಿ, ಪತ್ತಿನ ಮಹಾಮಂಡಳದ ಅಧ್ಯಕ್ಷರೂ ಆದ ವಿ.ರಾಜು ಪ್ರಾಸ್ತಾವಿಕವಾಗಿ ಮಾತನಾಡಿ ಅನೇಕ ಹಿರಿಯರು ಸಮಾಲೋಚನೆ ನಡೆಸಿ ಹುಟ್ಟು ಹಾಕಿದ ದುರ್ಗಿಗುಡಿ ಸೊಸೈಟಿ ಇಂದಿಗೂ ಸದೃಢವಾಗಿ ಮುನ್ನಡೆಯುತ್ತಿದೆ ಪ್ರತಿನಿತ್ಯ ಸಣ್ಣಪುಟ್ಟ ವ್ಯವಹಾರ ನಡೆಸಿ ಜೀವನ ನಡೆಸುವವರಿಗೆ ಸಾಲ ನೀಡುತ್ತಿರುವುದು ಇದರ ಹೆಗ್ಗಳಿಕೆ ಯಾಗಿದೆ ಎಂದರು.

ಸಂಘದ ಅಧ್ಯಕ್ಷರಾದ ನರಸಿಂಹ ಗಂಧದ ಮನೆ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಚನ್ನಬಸಪ್ಪ, ಬಲ್ಕಿಷ್ ಭಾನು, ಡಾ ಧನಂಜಯ ಸರ್ಜಿ ಭೋವಿ ನಿಗಮದ ಅಧ್ಯಕ್ಷರಾದ ರವಿಕುಮಾರ್, ಸೂಡಾ ಅಧ್ಯಕ್ಷ ಹೆಚ್.ಎಸ್.ಸುಂದರೇಶ್, ಸಹಕಾರಿಗಳಾದ ಎಸ್.ಕೆ.ಮರಿಯಪ್ಪ, ಎಂ.ಕೆ.ಸುರೇಶ್ ಕುಮಾರ್ ಉಮಾಶಂಕರ ಉಪಾಧ್ಯಾಯ, ಎಸ್.ಪಿ. ಶೇಷಾದ್ರಿ, ಸಂಘದ ನಿರ್ದೇಶಕರಾದ ಜಿ.ಚಂದ್ರಶೇಖರ್ ಕವಿತಾಸಾಗರ್ ಎನ್, ಉಮಾಪತಿ ಎನ್ ಮತ್ತಿತರರು ಇದ್ದರು. ಸೊಸಯಟಿ ಮಾಜಿ ಅಧ್ಯಕ್ಷರು ಎಸ್.ಎಸ್.ಎಲ್.ಸಿ ಹಾಗೂ ಪಿಯೂಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸದಸ್ಯ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.



# ಶಿವಮೊಗ್ಗದಲ್ಲಿ ಶ್ರೀ ಡಿ. ದೇವರಾಜ ಅರಸು ಜಯಂತಿ ಮತ್ತು ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಣೆ




ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶಿವಮೊಗ್ಗ ವತಿಯಿಂದ 109ನೇ ಶ್ರೀ ದೇವರಾಜು ಅರಸ್ ಜಯಂತಿ ಮತ್ತು ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಿಸಲಾಯಿತು ಗಣ್ಯರುಗಳಾದ ಶ್ರೀ ಬಿ.ವೈ. ರಾಘವೇಂದ್ರ, ಸನ್ಮಾನ್ಯ ಸಂಸದರು (ಲೋಕಸಭೆ) ಶಿವಮೊಗ್ಗ ಕ್ಷೇತ್ರ, ಶ್ರೀ ಗೋಪಾಲಕೃಷ್ಣ ಬೇಳೂರು ಸನ್ಮಾನ್ಯ ಶಾಸಕರು (ವಿಧಾನ ಸಭೆ) ಶಿವಮೊಗ್ಗ ಶ್ರೀ ಎಸ್.ಎನ್. ಚನ್ನಬಸಪ್ಪ ಸನ್ಮಾನ್ಯ ಶಾಸಕರು (ವಿಧಾನ ಸಭೆ) ಶಿವಮೊಗ್ಗ, ಶ್ರೀಮತಿ ಬಲ್ಕೀಶ್ ಬಾನು ಸನ್ಮಾನ್ಯ ಶಾಸಕರು (ವಿಧಾನ ಪರಿಷತ್) ಶ್ರೀ ಡಿ.ಎಸ್. ಅರುಣ್, ಸನ್ಮಾನ್ಯ ಶಾಸಕರು (ವಿಧಾನ ಪರಿಷತ್).

ಶ್ರೀ ರವಿಕುಮಾರ್, ಸನ್ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಭೋವಿ ಅಭಿವೃದ್ಧಿ ನಿಗಮ, ಡಾ.ಆರ್.ಶ್ರೀಧರ್ ಹುಲ್ತಿಕೊಪ್ಪ, ಜಿಲ್ಲಾ ಅಧ್ಯಕ್ಷರು, ಆರ್ಯ ಈಡಿಗರ ಸಂಘ, ಶಿವಮೊಗ್ಗ, ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವಿ. ರಾಜು, ಡಾ. ಧನಂಜಯ ಸರ್ಜ ಸನ್ಮಾನ್ಯ ಶಾಸಕರು (ವಿಧಾನ ಪರಿಷತ್) ಪ್ರೊಫೆಸರ್ ಶ್ರೀ ರಾಜಪ್ಪ ದಳವಾಯಿ ಶ್ರೀ ಎಸ್.ಪಿ. ಶೇಷಾದ್ರಿ ಶ್ರೀ ಗುರುದತ್ತ ಹೆಗಡೆ ಜಿಲ್ಲಾಧಿಕಾರಿಗಳು, ಭಾ.ಆ.ಸೇ, ಶಿವಮೊಗ್ಗ, ಶ್ರೀ ಜಿ.ಕೆ. ಮಿಥುನ್ ಕುಮಾರ್, ಭಾ.ಆ.ಸೇ ಪೊಲೀಸ್ ಅಧೀಕ್ಷಕರು, ಶಿವಮೊಗ್ಗರವರು ಸಮ್ಮುಖದಲ್ಲಿ ಆಚರಿಸಲಾಯಿತು.

**ಬ್ರಹ್ಮರ್ಶಿ ಶ್ರೀ ನಾರಾಯಣಗುರು :** ಸಮಾಜದಲ್ಲಿ ಕೆಲವರ ಪ್ರಾಬಲ್ಯ ಹಲವರ ನಲುಗುವಿಕೆಗೆ ಕಾರಣವಾದಾಗ ಸಮಾಜದ ಓರೆ ಕೋರೆಗಳನ್ನು ತಿಳಿಸಿ ತಿದ್ದಿ ಸರಿದಾರಿಗೆ ಕೊಂಡೊಯ್ಯುವ ಪ್ರಯತ್ನವನ್ನು ಮಹಾಪುರುಷರು ಅಂದಿನಿಂದ ಇಂದಿನವರೆಗೆ ಮಾಡುತ್ತಲೇ ಬಂದಿದ್ದಾರೆ. ಪರಸ್ಪರ ಜೀವಿಗಳ ನಡುವೆ ಸಂಪೂರ್ಣ ಸೌಹಾರ್ದ ಭಾವ ಇಂದಿಗೂ ಕನಸೇ ಆಗಿದ್ದರು ಪ್ರಯತ್ನ ಪೂರಕವಾಗಿಯಾದರೂ ಮಾನವೀಯತೆಯ ಕಂಪನ್ನು ಪಸರಿಸುವ ಕಾರ್ಯವನ್ನು ಈ ಮಹಾನ್ ಚೇತನಗಳು ಮಾಡಿದ್ದರಿಂದಲೇ ಇಂದಿಗೆ ಇಷ್ಟಾದರೂ ಕಲಿತು ಬಾಳುವ ವ್ಯವಸ್ಥೆ ನಮ್ಮೊಂದಿಗಿದೆ. ಹೀಗೆ ಹಳಿತಪ್ಪಿದ ಸಾಮಾಜಿಕ ಸನ್ನಿವೇಶಗಳಲ್ಲಿ ಜನಿಸಿ ಸ್ವಂತಕ್ಕಾಗಿ ಶ್ರಮಿಸಬೇಕು ಸಮಾಜೋದ್ದಾರಕ್ಕಾಗಿ ಸರ್ವಸ್ವವನ್ನು ಮುಡಿಪಾಗಿರಿಸಿದ ಭಾರತೀಯ ಸಾಮಾಜಿಕ ಸುಧಾರಕರು ಹಾಗೂ ದಾರ್ಶನಿಕರಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಪ್ರಮುಖರು. ಇಂದು ಕೇರಳದಲ್ಲಿ ಒಂದು ಕಾಲಘಟ್ಟದಲ್ಲಿ ಅತಿಯಾದ ಮೌಢ್ಯ ಅಂದ ಆಚರಣೆಗಳು, ಜಾತೀಯ ಕುಕೃತ್ಯಗಳು ಮೇರೆ ಮೀರಿ ಶೋಷಣೆ ಮತ್ತು ದಬ್ಬಾಳಿಕೆಗಳು ಸಾಂಕ್ರಾಮಿಕವಾಗಿದ್ದವು. ಇಂತಹ ಘೋರ ಸನ್ನಿವೇಶದಲ್ಲಿ ಸಾಮಾಜಿಕ ತಾರತಮ್ಯಗಳನ್ನು ಕಳೆದು ಸಮಸಮಾಜ ನಿರ್ಮಿಸಲು ಶತಾಯಗತಾಯ ಪ್ರಯತ್ನಿಸಿದ ಧೀಮಂತರು ಇವರು. ಸತ್ಯ ಮತ್ತು ಸನ್ಮಾರ್ಗದ ಸಾಧನೆಗಾಗಿ ತಪಗೈದ ತಪಸ್ವಿಗಳು ಬದುಕಿಗೂ ಭಾವಕ್ಕೂ ಬರಹಕ್ಕೂ ವ್ಯತ್ಯಯವಿಲ್ಲದಂತೆ ಬದುಕಿದ ಅನುಭವಿ ಸಂತರು ಬ್ರಹ್ಮರ್ಷಿ ನಾರಾಯಣ ಗುರುಗಳು. ಕೆಳವರ್ಗದಲ್ಲಿ ಜನಿಸಿ ತಮ್ಮ ಐದನೇ ವಯಸ್ಸಿನಲ್ಲಿ ಗುರುಕುಲ ಮಾದರಿ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದ ಇವರಿಗೆ ಹೆತ್ತವರು ನೀಡಿದ

ಮಾರ್ಗದರ್ಶನ ಅಪಾರವಾದದ್ದು, ತಂದೆಯವರು ಹೊಂದಿದ್ದ ಅಪಾರ ಪಾಂಡಿತ್ಯ ಇವರ ಮೇಲೆ ಪ್ರಭಾವವನ್ನು ಬೀರಿತು. ಇದರಿಂದಾಗಿ ಬಾಲ್ಯದಿಂದಲೇ ಸುತ್ತಲಿನ ಸನ್ನಿವೇಶವನ್ನು ತಮ್ಮ ಒಳಗಣ್ಣಿನಿಂದ ನೋಡಲು ಸಾಧ್ಯವಾಯಿತು ರಾಮಾಯಣ ಮತ್ತು ಮಹಾಭಾರತದ ಸತ್ಯದ ಕಥೆಗಳನ್ನು ಸನ್ಮನಗಳಿಂದ ಸ್ವೀಕರಿಸಿ ಜೀವನದ ದಿಕ್ಕನ್ನೇ ಬದಲಾಯಿಸಿಕೊಂಡರು.

ಬಾಲಕರಾಗಿದ್ದ ನಾರಾಯಣರಿಗೆ ತಮ್ಮ ಸುತ್ತಮುತ್ತ ನಡೆಯುತ್ತಿದ್ದ ಅಸಮಾನತೆಯ ಸಂಗತಿಗಳು ಮರುಗುವಂತೆ ಮಾತನಾಡುತ್ತಿದ್ದವು. ಮೇಲ್ವರ್ಗ ಮತ್ತು ಕೆಳವರ್ಗದ ಭೇದ ಭಾವ, ಮೇಲು ಕೀಳು ಭಾವನೆ ಸ್ತ್ರೀಯರ ವೇಷ ಭೂಷಣದ ಮೇಲಿದ್ದಂತಹ ನಿರ್ಬಂಧ, ಕೆಳವರ್ಗದವರಿಗೆ ದೇವಸ್ಥಾನಗಳಲ್ಲಿ ಪ್ರವೇಶ ನಿರಾಕರಣೆ, ಸಾರ್ವಜನಿಕ ಬಾವಿಗಳಲ್ಲಿ ಎಲ್ಲರೂ ನೀರು ತರಲು ಅವಕಾಶ ಇಲ್ಲದಿರುವುದು, ಮಹಿಳೆಯರ ಮೇಲೆ ಅಸಹ್ಯಕರ ಸ್ತನ ತೆರಿಗೆ ಪದ್ಧತಿ, ಅಂತರ್ಜಾತಿ ವಿವಾಹ ಅಕ್ಷಮ್ಯ ಅಪರಾಧವಾಗಿದ್ದುದು, ಇವೆಲ್ಲವೂ ಕೂಡ ಪ್ರಕೃತಿಗೆ ವಿರುದ್ಧವಾಗಿಯೂ ಕಂಡವು. ತಲೆತಲಾಂತರಗಳಿಂದ ಬೇರುಬಿಟ್ಟಿದ್ದ ಈ ವ್ಯವಸ್ಥೆಯನ್ನು ಕ್ರಾಂತಿಯ ಮೂಲಕ ವಿರೋಧಿಸುವುದು ಅಷ್ಟು ಸುಲಭ ಸಾಧ್ಯ ಆಗಿರಲಿಲ್ಲ.

ಇದರಿಂದಾಗಿ ತಾನು ಮೊದಲು ಜ್ಞಾನ ಸಂಪನ್ನನಾಗಿ ಕಾರ್ಯದಲ್ಲಿ ತನ್ಮೂಲಕ ಸುಧಾರಣೆಗೆ ಮುಂದಡಿ ಇಡಲು ಅಧ್ಯಯನ ಕಾರ್ಯದಲ್ಲಿ ನಿರತರಾದರು. ಸಂಕಷ್ಟಗಳು ಇವರಿಗೂ ತಪ್ಪಲಿಲ್ಲ. ಗುರು ಹಾಗುವ ಮೊದಲು ಅನೇಕ ರೀತಿಯ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿದರು. ಮೇಲ್ಜಾತಿಯವರಿಗೆ ಉನ್ನತ ದೇವರುಗಳು ಕೆಳಜಾತಿಯವರಿಗೆ ಒಂದಿಷ್ಟು ನಿಕೃಷ್ಟ ದೇವರುಗಳು ಎಂದು ಪವಿತ್ರ ದೈವಿಕ ಆರಾಧನೆಯನ್ನು ಅಸಮಾನತೆ ತುಂಬಿದ್ದ ಸಮಯದಲ್ಲಿ ನಾರಾಯಣ ಗುರುಗಳು ಒಂದೇ ಜಾತಿ ಅದು ಮಾನವ ಜಾತಿ ಒಂದೇ ಧರ್ಮ ಅದು ಮಾನವೀಯತೆಯ ಧರ್ಮ ಒಂದೇ ದೇವರು ಅವರು ಎಲ್ಲರ ಪೊರೆವ ದೇವರು ಎಂದು ಸಾರುತ್ತ ಕೆಳವರ್ಗದವರ ಸಾಮಾಜಿಕ ಹಾಗೂ ಧಾರ್ಮಿಕ ಉನ್ನತಿಯ ಕನಸುಗಳಿಗೆ ಜೀವ ತುಂಬಿದರು ದೈವ ಭಕ್ತಿಯ ಭಾವವನ್ನು ಸ್ಫುರಿಸುವ ಸ್ತೋತ್ರಗಳನ್ನು ಹಾಡುಗಳನ್ನು ಬರೆದರು.

ಇವರು ತಮಿಳು, ಸಂಸ್ಕೃತ, ಮಲಯಾಳಂನಲ್ಲಿ ರಚಿಸಿದ ಸುಮಾರು 79 ಕೃತಿಗಳು ಇವರ ಬೌದ್ಧಿಕ ಪ್ರಕರತೆಗೆ ಸಾಕ್ಷಿಯಾಗಿವೆ, ಮಾನವತೆಗಿಂತ ಮಿಗಿಲಾದ ಧರ್ಮವಿಲ್ಲ ಎಂದು ಪ್ರತಿಪಾದಿಸಿದ ಗುರುಗಳು ದೇವರಿದ್ದಲಿಗೆ ನಿಮ್ಮನ್ನು ಬಿಡದಿದ್ದರೇನಂತೆ. ನೀವು ಇದ್ದಲ್ಲಿಗೆ ದೇವರನ್ನು ಕರೆತರುತ್ತೇನೆ ಎಂದು ಹೇಳಿ ಅನೇಕ ದೇವಾಲಯಗಳನ್ನು ಸ್ಥಾಪಿಸಿದರು. ಎಲ್ಲರಿಗೂ ಮುಕ್ತ ಪ್ರವೇಶ ನೀಡಿದರು. ಅದರಲ್ಲಿ ಅರವಿಪುರಂನ ಶಿವ ದೇವಾಲಯ ಅತ್ಯಂತ ಪ್ರಮುಖವಾದದ್ದು.

ನಾನು ಸ್ಥಾಪಿಸಿದ ದೇವಾಲಯಗಳ ಬಾಗಿಲು ಎಲ್ಲಾ ಜಾತಿ ಧರ್ಮದವರಿಗೂ ತೆರೆದಿರಬೇಕೆಂಬ ಆಶಯವನ್ನು ಹೊಂದಿದ್ದರು. ನಿಸರ್ಗ ಸಹಜ ಹಾಗೂ ನಿಸರ್ಗ ಪೂರಕ ಬದುಕು, ಇವರ ಪರಿಕಲ್ಪನೆಗಳಲ್ಲಿ ಒಂದಾಗಿತ್ತು. ಪ್ರಕೃತಿ ದತ್ತವಾದ ಬದುಕೆ ನಮ್ಮ ನಿಜವಾದ ಬದುಕು ಎಂದು ನುಡಿದ ಗುರುಗಳು ದಟ್ಟಾರಣ್ಯದಲ್ಲಿ ಆಶ್ರಮವನ್ನು ಸ್ಥಾಪಿಸಿ ಯೋಗ ಮತ್ತು ಧ್ಯಾನದಲ್ಲಿ ನಿರತರಾಗಿದ್ದರು. ತಾವು ಸ್ಥಾಪಿಸಿದ ದೇವಾಲಯಗಳಲ್ಲಿ ದೇವರ ಮೂರ್ತಿಯ ಬದಲಾಗಿ ಕನ್ನಡಿಯನ್ನು ನಿಲ್ಲಿಸಿದ್ದರು. ಪ್ರತಿಯೊಬ್ಬ ವ್ಯಕ್ತಿಯು ತನ್ನ ಅಂತರಾಳದಲ್ಲಿರುವ ದೈವತ್ವಕ್ಕೆ ಶ್ರಮಿಸುವ ಮಾರ್ಮಿಕ ಅರ್ಥವನ್ನು ಈ ಆಚರಣೆಯು ಹೊಂದಿತ್ತು. ಪ್ರತಿ ವ್ಯಕ್ತಿಯು ತನ್ನೊಳಗಿನ ಜೀವ ಚೈತನ್ಯವನ್ನು ಗುರುತಿಸುವ ಭಾವವು ಇದರಲ್ಲಿ ಸೇರಿತು.

ಇವರ ಹೋರಾಟವು ರಾಷ್ಟ್ರವ್ಯಾಪಿ ಗಮನ ಸೆಳೆದದ್ದು ಮಹಾತ್ಮ ಗಾಂಧೀಜಿಯವರು ನಾರಾಯಣ ಗುರುಗಳ ಮೌನ ಹೋರಾಟವನ್ನು ಮೆಚ್ಚಿಕೊಂಡಿದ್ದರು. ಶಿಕ್ಷಣವು ಆತ್ಮೋದ್ಧಾರದ ಸಾಧನ ಎಂದು ಪ್ರತಿಯೊಬ್ಬರು ಇದನ್ನು ಪಡೆಯುವ ಮಹತ್ವವನ್ನು ಅರ್ಥೈಸಿದ್ದರಿಂದ ಎಲ್ಲಾ ವರ್ಗಗಳ ಜನರು ಅರಿವಿನತ್ತ ಹೆಜ್ಜೆ ಹಾಕಿದರು. ಕೃಷಿ ಕುರಕುಶಲ ಕಲೆಗಳು ಜೀವನದ ಅವಿಭಾಜ್ಯ ಅಂಗಗಳಾಗಿರಬೇಕಾದ ಅಗತ್ಯವನ್ನು ಮನಗಾಣಿಸಿದರು. ಒಂದು ಕಾಲದಲ್ಲಿ ಸ್ವಾಮಿ ವಿವೇಕಾನಂದರು ಕೇರಳವನ್ನು ಭೇಟಿ ಮಾಡಿದಾಗ ಬದಲಾಯಿಸಲಾಗದ ಅಂದಿನ ದುರವಸ್ಥೆಯನ್ನು ಕಂಡು ಇದೊಂದು ಮನೋರೋಗಿಗಳ ಆಸ್ಪತ್ರೆ ಎಂದು ಕರೆದಿದ್ದರು.

ಈ ಆಸ್ಪತ್ರೆಯನ್ನು ಒಂದು ಪ್ರಬುದ್ಧ ಶಾಲೆಯಾಗಿ ಪರಿವರ್ತಿಸುವ ಕಾರ್ಯದಲ್ಲಿ ಶ್ರೀ ನಾರಾಯಣ ಗುರುಗಳ ಪಾತ್ರ ಬಹಳಷ್ಟು ಇದೆ. ಕೇರಳ ತಮಿಳುನಾಡು ಕರ್ನಾಟಕ ಆಂಧ್ರಪ್ರದೇಶ ಈ ರಾಜ್ಯಗಳಲ್ಲಿ ಇವರ ವಿಚಾರಧಾರೆಯು ಹಲವು ಕಡೆಗಳಲ್ಲಿ ಜಾಗೃತವಾಗಿರುವುದನ್ನು ಕಾಣಬಹುದಾಗಿದೆ ಸಾಮಾಜಿಕ ನ್ಯಾಯ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ಮೌಢ್ಯಗಳ ನಿವಾರಣೆ ಸರಳ ವಿವಾಹಕ್ಕೆ ಪ್ರೋತ್ಸಾಹ ದೇವಾಲಯಗಳು ಮುಕ್ತ ಪ್ರವೇಶ ಈ ಎಲ್ಲಾ ಆಶಯಗಳು ಹಂತ ಹಂತವಾಗಿ ಈಡೇರುತ್ತಿದ್ದು ಹಿಂದೆ ಇಂದು ಮುಂದೆಯೂ ಇವರ ಆಸೆಗಳು ಪ್ರಸ್ತುತವಾಗಿವೆ. ಸಾಮಾನ್ಯರಲ್ಲಿ ಸಾಮಾನ್ಯರಂತೆ ಬದುಕಿದವರು ಇವರು. ಜಗತ್ತಿನಲ್ಲಿ ಉತ್ತಮವಾಗಿರುವುದನ್ನೆಲ್ಲ ಹೇಳಿ ಆಗಿದೆ ಪಾಲಿಸುವುದೊಂದೇ ಎಂಬ ಮಹಾತ್ಮರ ನುಡಿಯಂತೆ ಇಂತಹ ಮಹನೀಯರ ಬದುಕು ಬೋಧನೆ ನಮ್ಮ ಆತ್ಮಧಾರಕ್ಕೆ ಅಪೇಕ್ಷಣೀಯ.

**▸▸ ಜ್ಯೋತಿ ಕುಮಾರಿ ಕೆ.ವೈ**

# ಗಣೇಶ ಚತುರ್ಥಿ : ಜಾತಿ, ಧರ್ಮಗಳ ಮೀರಿದ ದೇಶಭಕ್ತಿ; ಏಕತಾ ಶಕ್ತಿ

ಚೌತಿ ಸಂಭಮ; ಗಣೇಶ ಹಬ್ಬಕ್ಕೆ ಹಿಂದೂ ಸಂಸ್ಕೃತಿಯಲ್ಲಿ ಒಂದು ವಿಶೇಷ ಸ್ಥಾನವಿದೆ. ಸಿದ್ಧಿ ವಿನಾಯಕ, ಗಣೇಶ, ಗಜಮುಖ, ಏಕದಂತ, ವಕ್ರತುಂಡ, ಲಂಬೋದರ, ಮೂಷಕ ವಾಹನ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಪ್ರಥಮ ಪೂಜಿತ ಗಜಮುಖನನ್ನು ಆರಾಧಿಸಿದ ನಂತರವೇ ಪ್ರತಿಯೊಂದು ಶುಭಕಾರ್ಯಕ್ಕೂ ಚಾಲನೆ ನೀಡಲಾಗುತ್ತದೆ.

ಗಣೇಶನ ಚತುರ್ಥಿ ವಿಶೇಷವಾಗಿ ಮುದ್ದು ಮಕ್ಕಳು ಹಾಗೂ ಪ್ರಕೃತಿಯನ್ನು ಏಕಕಾಲಕ್ಕೆ ಪೂಜಿಸುವ ಹಬ್ಬವಾಗಿದೆ. ಈ ಹಬ್ಬದಲ್ಲಿ ಪುಟ್ಟ ಗಣೇಶನಿಗೆ ಪೂಜೆ ಸಲ್ಲಿಸುವುದು ವಿಶೇಷವೂ ಹೌದು. ಗಜಮುಖನಿಗೆ ಇಷ್ಟವಿರುವ ವೈವಿಧ್ಯಮಯ ಕಜ್ಜಾಯ, ತಿಂಡಿ ತಿನಿಸುಗಳನ್ನು ತಯಾರಿಸಿ ನೈವೇದ್ಯ ಮಾಡುವುದು ವಾಡಿಕೆ. ಮುಖ್ಯವಾಗಿ ಮನೆಯ ಮುದ್ದು ಮಕ್ಕಳ ಇಷ್ಟಾರ್ಥಗಳನ್ನು ಈಡೇರಿಸಿ ಅವರನ್ನು ಖುಷಿಪಡಿಸುವುದೂ ಹಬ್ಬದ ವೈಶಿಷ್ಟ್ಯ. ಮತ್ತೆ, ಮನೆ ಮಂದಿಯಲ್ಲಾ ಒಗ್ಗೂಡಿ ಸಂಭ್ರಮಿಸುವುದು ಕೂಡ ಈ ಹಬ್ಬದ ವಿಶೇಷತೆಯಾಗಿದೆ.

ಆನೆಯ ತಲೆಯನ್ನು ಹೊಂದಿರುವ ಗಣೇಶ ಪ್ರಕೃತಿಯನ್ನು ಪೂಜಿಸುವ ಸಂದೇಶ ಸಾರುವ ಸಂಕೇತವಾಗಿದೆ. ಮಕ್ಕಳನ್ನು ಮತ್ತು ಪ್ರಕೃತಿಯನ್ನು ಏಕಕಾಲಕ್ಕೆ ಪೂಜಿಸುವುದೆ ಗಣೇಶ ಚತುರ್ಥಿಯ ವಿಶೇಷವಾಗಿದೆ. ಜಾತಿ ಮತ ಧರ್ಮ, ಭಾಷೆ, ಬಣ್ಣ ಮೀರಿ ಗಣೇಶ ಚತುರ್ಥಿಯನ್ನು ಜಗತ್ತಿನ ನಾನಾ ಭಾಗಗಳಲ್ಲಿ ಸಡಗರ –ಸಂಭ್ರಮಗಳಿಂದ ಆಚರಿಸಲಾಗುತ್ತದೆ. ಭಾರತವಲ್ಲದೆ ಸಾಗರೋತ್ತರ ದೇಶಗಳಲ್ಲೂ ಗಣೇಶ ಹಬ್ಬ ಆಚರಿಸಲಾಗುತ್ತದೆ.

ಪ್ರತಿವರ್ಷದಂತೆ ಈ ಬಾರಿಯೂ ಕೂಡ ಹಬ್ಬದ ಸಡಗರಕ್ಕೆ ಒಂದೆಡೆಯಿಂದ ತಳಿರು ತೋರಣದ ಬಿರುಸು ಪ್ರಾರಂಭಗೊಂಡಿದ್ದರೆ, ಮತ್ತೊಂದೆಡೆಯಿಂದ ತಿಂಗಳುಗಟ್ಟಲೆಯ ಪೂಜೆ ಸ್ವೀಕರಿಸಲು ಗಣೇಶನ ವಿಗ್ರಹ ಕೂಡ ಭರದಿಂದ ಸಿದ್ಧಗೊಳ್ಳುತ್ತಿದೆ. ಗಣೇಶ ಹಬ್ಬದ ವಿಶೇಷತೆಯೇ ಅದು. ಎಲ್ಲಾ ಹಬ್ಬಗಳ ಆಚರಣೆ ಹೆಚ್ಚೆಂದರೆ ಮೂರ್ನಾಲ್ಕು ದಿನಗಳಿದ್ದರೆ ಈ ಗಣೇಶ ಹಬ್ಬವು ಕೆಲವೆಡೆ ಬರೋಬ್ಬರಿ ಒಂದು ತಿಂಗಳವರೆಗೂ ಚಾಲ್ತಿಯಲ್ಲಿರುತ್ತದೆ. ಮಣ್ಣಿನ ಗಣಪನಿಗೆ ಅಲಂಕಾರ ಮಾಡಿ ಅದರ ಮುಂದೆ ನಮ್ಮೆಲ್ಲರ ತಾಪತ್ರಯಗಳನ್ನು ತಿಳಿಸಿ ಮನಸ್ಸು ಹಗುರಾಗಿಸಿ ಕೊನೆಗೆ ಆತನನ್ನು ನೀರಲ್ಲಿ ಲೀನಗೊಳಿಸುವುದು ಗಣೇಶ ಹಬ್ಬದ ವೈಶಿಷ್ಟ್ಯ.

### ಗಣೇಶೋತ್ಸವದ ಮೂಲಕ ಸ್ವಾತಂತ್ರ್ಯ ಹೋರಾಟಕ್ಕ ಬಲ ತುಂಬಿದ ತಿಲಕ್

ಭಕ್ತಿ ಹಾಗೂ ಭಾವೈಕ್ಯತೆಯ ಹಿನ್ನೆಲೆಯಲ್ಲಿ ಬಾಲಗಂಗಾಧರ ತಿಲಕರ ಮುಂದಾಳತ್ವದಲ್ಲಿ ಹುಟ್ಟಿ ಬೆಳೆದ ಗಣೇಶ ಹಬ್ಬವು ಇಂದು ನಮ್ಮೆಲ್ಲರ ಅಚ್ಚುಮೆಚ್ಚಿನ ಹಬ್ಬ. ಚದುರಿ ಹೋಗಿದ್ದ ಅಂದಿನ ಅನಕ್ಷರಸ್ಥ ಸಮಾಜದಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಜನರನ್ನು ಒಂದೇ ವೇದಿಕೆಯಡಿ ಏಕೀಕರಣಗೊಳಿಸಲು ತಿಲಕರು ಆಯ್ಕೆ ಮಾಡಿದ್ದೇ ಈ ಗಣೇಶ ಹಬ್ಬವನ್ನು. ಜನರೂ ಅಷ್ಟೇ. ತಿಲಕರ ಕರೆಗೆ ಜಾತಿ–ಮತ ಬೇಧವಿಲ್ಲದೆ ಬಹುಬೇಗನೆ ಸ್ಪಂದಿಸಿದರು. ದೇಶಾದ್ಯಂತ ಭಕ್ತಿಯ ಪ್ರವಾಹ ಹರಿಯುವುದರೊಂದಿಗೆ



ಬ್ರಿಟಿಷರಿಗೆ ನಮ್ಮ ಏಕತೆಯ ಬಿಸಿಯನ್ನೂ ಮುಟ್ಟಿಸಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಗಣೇಶನ ಹಬ್ಬ ಕೇವಲ ಕುಟುಂಬದ ಆಚರಣೆಯಾಗಿತ್ತು. ಮನೆ–ಮನೆಗಳಲ್ಲಿ ಮಾತ್ರ ಆಚರಣೆಯಲ್ಲಿದ್ದ ಗಣೇಶೋತ್ಸವವನ್ನು ಲೋಕಮಾನ್ಯ ಬಾಲಗಂಗಾಧರ ತಿಲಕರು ಜನರಲ್ಲಿನ ಸ್ವಾತಂತ್ರ್ಯದ ಕಿಚ್ಚನ್ನು ಹೊರಗೆಡವುವ ಸಾಧನವಾಗಿ ಬಳಸಿಕೊಂಡರು. 1892ರಲ್ಲಿ ಮಹಾರಾಷ್ಟ್ರದಲ್ಲಿ ಬಾವ್ ಸಾಹೆಬ್ ಲಕ್ಷ್ಮಣ್ ಜವೇಲ್ ಅವರು ಪ್ರಪ್ರಥಮ ಸಾರ್ವಜನಿಕ ಗಣೇಶೋತ್ಸವವನ್ನು ಆಚರಣೆ ಮಾಡಿದರಾದರೂ, 1893ರಲ್ಲಿ ತಿಲಕರು ಅದಕ್ಕೆ ಸಂಪೂರ್ಣ ಸಾರ್ವಜನಿಕ ಸ್ವರೂಪ ನೀಡಿದರು. ತಮ್ಮ ಕೇಸರಿ ಪತ್ರಿಕೆಯಲ್ಲಿ ಸಾರ್ವಜನಿಕ ಗಣೇಶೋತ್ಸವದ ಪರಿಕಲ್ಪನೆ ಕುರಿತು ಬರೆದಿದ್ದ ತಿಲಕರು, 1894ರಲ್ಲಿ ಪುಣೆಯ ಕೇಸರಿ ವಾಡದಲ್ಲಿ ಪ್ರಪ್ರಥಮ ಸಾರ್ವಜನಿಕ ಗಣೇಶೋತ್ಸವವನ್ನು ಆರಂಭಿಸಿದರು.

ಗಣೇಶ ಚತುರ್ಥಿಯ ಸಾಂಸ್ಕೃತಿಕ ಮಹತ್ವವನ್ನು ಅರಿತಿದ್ದ ಲೋಕಮಾನ್ಯ ತಿಲಕರು, ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ನಡುವಿನ ಅಂತರವನ್ನು ತುಂಬಲು, ಅವರ ನಡುವೆ ಕೆಳಹಂತದಲ್ಲಿ ಐಕ್ಯತೆ ಮೂ,ಡಿಸುವುದಕ್ಕೆ ಸೂಕ್ತ ಸಂದರ್ಭವಾಗಿ ಗಣೇಶೋತ್ಸವದ ಆಚರಣೆಯನ್ನು ರಾಷ್ಟ್ರೀಯ ಹಬ್ಬವಾಗಿ ಸಮರ್ಪಕವಾಗಿ ಬಳಸಿಕೊಂಡರು.



ಆರಂಭದಲ್ಲಿ ಇದು ಜಾತಿ–ಜಾತಿಗಳ ನಡುವಿನ ಏಕತೆಯ ಪ್ರತೀಕದಂತೆ ಕಂಡು ಬಂದರೂ ಕ್ರಮೇಣ, ಬ್ರಿಟೀಷ್ ದುರಾಡಳಿತದ ವಿರುದ್ಧ ತಿಲಕರು ಆರಂಭಿಸಿದ ಪರೋಕ್ಷ ಹೋರಾಟ ಎಂಬುದು ಅರ್ಥವಾಯಿತು. ತಿಲಕರು ಬ್ರಿಟಿಷರ ವಿರುದ್ಧ ಭಾರತದ ಪ್ರತಿಭಟನೆಗೆ ಗಣೇಶನನ್ನು ಕೇಂದ್ರ ಬಿಂದುವಾಗಿ ಬಳಸಿಕೊಂಡರು. ಏಕೆಂದರೆ ಗಣೇಶ ಪ್ರತಿಯೊಬ್ಬರ ಪಾಲಿಗೂ ದೇವಸ್ವರೂಪಿಯಾಗಿದ್ದ.

ಮಹಾರಾಷ್ಟ್ರದಲ್ಲಿ ಪೇಶ್ವೆ ಆಡಳಿತದಲ್ಲಿ ಮುಖ್ಯ ಹಬ್ಬವಾಗಿದ್ದ ಗಣೇಶೋತ್ಸವ, ಸ್ವರಾಜ್ ಆಂದೋಲನದ ಸಂದರ್ಭದಲ್ಲಿ ಸಂಘಟಿತ ಸ್ವರೂಪ ಪಡೆಯಿತು. ಗಣೇಶನ ಬೃಹತ್ ವಿಗ್ರಹಗಳನ್ನು ಪ್ರತಿಷ್ಠಾಪಿಸಿ 10ನೇ ದಿನ ಎಲ್ಲ ವಿಗ್ರಹಗಳನ್ನು ವಿಸರ್ಜನೆ ಮಾಡುವ ಪ್ರಕ್ರಿಯೆಯನ್ನು ತಿಲಕರು ಆರಂಭಿಸಿದರು. ನೃತ್ಯ, ನಾಟಕಗಳು, ಕವಿತೆ ವಾಚನ, ಸಂಗೀತ ಗೋಷ್ಠಿಗಳು, ಚರ್ಚಾಗೋಷ್ಠಿಗಳು ಮುಂತಾದವುಗಳ ರೂಪದಲ್ಲಿ ಗಣೇಶೋತ್ಸವವು ಸಮುದಾಯದ ಪಾಲ್ಗೊಳ್ಳುವಿಕೆಗೆ ನೆರವಾಯಿತು. ಜನರ ಮೇಲೆ ನಿಯಂತ್ರಣ ಹೇರಲು ಬ್ರಿಟಿಷ್ ಆಡಳಿತವು ಸಾಮಾಜಿಕ ಮತ್ತು ರಾಜಕೀಯ ಸಭೆಗಳನ್ನು ಬಹಿಷ್ಕರಿಸಿದ ಸಂದರ್ಭದಲ್ಲಿ ಗಣೇಶೋತ್ಸವವು ಎಲ್ಲಾ ಜಾತಿ, ಸಮುದಾಯಗಳು ಒಂದು ಕಡೆ ಕಲೆಯುವ ತಾಣವಾಯಿತು.

ಸಾರ್ವಜನಿಕ ಗಣೇಶೋತ್ಸವ ಪ್ರಾರಂಭವಾಗಿ 122 ವರ್ಷಗಳು ಕಳೆದಿವೆ. ಇಂದು ಭಾರತದ ಗಡಿ ದಾಟಿ ವಿದೇಶಗಳಲ್ಲೂ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ಗಣೇಶೋತ್ಸವ ಆಚರಿಸಲಾಗುತ್ತದೆ. ದೇಶಾದ್ಯಂತ ಸಾರ್ವಜನಿಕ ಗಣೇಶೋತ್ಸವ ಸಮಿತಿಗಳು ಅಸಂಖ್ಯಾತ ಸಂಖ್ಯೆಯಲ್ಲಿವೆ. ಇಂದು ದೇಶದ ಪ್ರತಿ ಗ್ರಾಮ, ತಾಲ್ಲೂಕು, ನಗರಗಳಲ್ಲೂ ಎಲ್ಲಾ ಜಾತಿ , ಧರ್ಮ, ಸಮುದಾಯದವರು ಸಂಘ ಕಟ್ಟಿಕೊಂಡು ಸಾರ್ವಜನಿಕ ಗಣೇಶೋತ್ಸವ ಆಚರಿಸುತ್ತಿದ್ದಾರೆ. ಬರೀ ಬೆಂಗಳೂರಿನಲ್ಲೇ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕ ಗಣೇಶೋತ್ಸವ ಸಮಿತಿಗಳಿವೆ. ಪ್ರತಿವರ್ಷವೂ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ವೈವಿಧ್ಯಮಯ ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಗಣೇಶ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತವೆ. ಅನ್ನ ಸಂತರ್ಪಣೆ, ಪ್ರಸಾದ ವಿತರಣೆ ನಡೆಯತ್ತವೆ. ಕಲರ್ ಫುಲ್ ಮೆರವಣಿಗೆಯೊಂದಿಗೆ ಗಣೇಶ ಮೂರ್ತಿಯನ್ನು ವಿಸರ್ಜಿಸಲಾಗುತ್ತದೆ.

### ಬ್ರಿಟೀಷ್ ದಾಳಿಗೆ ಹೆದರಿ ಅರ್ಧ ದಿನಕ್ಕೇ ಗಣೇಶ ವಿಸರ್ಜನೆ

ಇನ್ನು ಬ್ರಿಟೀಶ್ ಕಾಲದ ಕಹಿ ನೆನಪುಗಳು ಹೇಗಿವೆ ಎಂದರೆ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ತಿಲಕರು ಆರಂಭಿಸಿದ್ದ ಗಣೇಶೋತ್ಸವವನ್ನು ಅದೇ ಕಾರಣದಿಂದಾಗಿ ಅರ್ಧ ದಿನಕ್ಕೆ ಮೊಟಕುಗೊಳಿಸಿದ ಘಟನೆಯೂ ಕೂಡ ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಅದೂ ಕೂಡ ನಮ್ಮ ಕರ್ನಾಟಕದಲ್ಲಿ. ಕರ್ನಾಟಕದ ಒಂದು ಮೂಲೆಯಲ್ಲಿ ಇಂದಿಗೂ ಗಣೇಶ ವಿಗ್ರಹವನ್ನು ಕೇವಲ ಅರ್ಧ ದಿನಕ್ಕೇ ವಿಸರ್ಜನೆ ಮಾಡಲಾಗುತ್ತಿದೆ. ಸಾಮಾನ್ಯವಾಗಿ ಹುಬ್ಬಳ್ಳಿಯ ಗಣೇಶೋತ್ಸವ ಎಲ್ಲರಿಗೂ ಚಿರಪರಿಚಿತವೇ. ತಿಂಗಳುಗಟ್ಟಲೆ ಇಲ್ಲಿ ಗಣೇಶೋತ್ಸವ ನಡೆಯುತ್ತದೆ.

ಆದರೆ, ಇಂತಹ ಹುಬ್ಬಳ್ಳಿಯ ಕಲಘಟಗಿ ತಾಲ್ಲೂಕಿನ ಭೋಗೇನಾಗರಕೊಪ್ಪ ಗ್ರಾಮದಲ್ಲಿ ಮಾತ್ರ ಅರ್ಧದಿನ ಗಣೇಶ ಪ್ರತಿಷ್ಠಾಪನೆ ಮಾಡಲಾಗುತ್ತಿದೆ. ಭೋಗೇನಾಗರಕೊಪ್ಪದ ದೇಶಕುಲಕರ್ಣಿ ವಾಡೆಯಲ್ಲಿ ಗಣೇಶೋತ್ಸವದ ಬೆಳಗ್ಗೆ ಪ್ರತಿಷ್ಠಾಪನೆಗೊಳ್ಳುವ ಗಣೇಶನನ್ನು ಅದೇ ದಿನ ಮಧ್ಯಾಹ್ನ ವಿಸರ್ಜಿಸಲಾಗುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಕಲಘಟಗಿ ಪ್ರದೇಶದಲ್ಲಿ ತೀವ್ರ ಬರಗಾಲ ಆವರಿಸಿದ್ದ ಸಂದರ್ಭದಲ್ಲಿ ಸ್ಥಳೀಯ ಬ್ರಿಟೀಷ್ ಆಡಳಿತ ಉಪ್ಪಿಗೂ ಅಧಿಕ ತೆರಿಗೆ ವಿಧಿಸಿತ್ತು. ಹೀಗಾಗಿ ಅಲ್ಲಿನ ಜನರು ಕಂದಾಯ ಪಾವತಿ ಮಾಡುವ ಸ್ಥಿತಿಯಲ್ಲಿರಲಿಲ್ಲ. ಇದೇ ವಿಚಾರವಾಗಿ ಭೋಗೇನಾಗರಕೊಪ್ಪ ದೇಸಾಯಿ ಹಾಗೂ ಬ್ರಿಟೀಷರ ಮಧ್ಯೆ ಭಾರೀ ವಾಗ್ವಾದವಾಗಿತ್ತು.

ಇದೇ ಸಂದರ್ಭದಲ್ಲಿ ಬ್ರಿಟೀಷ್ ಅಧಿಕಾರಿಯಾಗಿದ್ದ ಲಾರ್ಡ್ ಡಾಲ್ ಹೌಸಿ ಜಾರಿಗೆ ತಂದ ದತ್ತು ಮಕ್ಕಳಿಗೆ ಹಕ್ಕಿಲ್ಲ ಕಾಯ್ದೆಗೆ ದೇಸಾಯಿ ಸಂಸ್ಥಾನವನ್ನು ಒಳಪಡಿಸಲು ಮುಂದಾದಾಗ ವಿರೂಪಾಕ್ಷ ದೇಸಾಯಿ ಎಂಬುವವರು ಬ್ರಿಟೀಷರ ವಿರುದ್ಧ ಚಳುವಳಿ ಆರಂಭಿಸಿದರು. ಅದೇ ಸಂದರ್ಭದಲ್ಲಿ ಹುಬ್ಬಳ್ಳಿಗೆ ಆಗಮಿಸಿದ್ದ ಲೋಕಮಾನ್ಯ ಬಾಲಗಂಗಾಧರ ತಿಲಕರು ಗಣೇಶ ಚುತುರ್ಥಿ ಮುಂದಿಟ್ಟುಕೊಂಡು ಜನರಲ್ಲಿ ಐಕ್ಯತೆ ಮೂಡಿಸುವ ನಿಟ್ಟಿನಲ್ಲಿ ಹೋರಾಡುತ್ತಿದ್ದರು. ಅವರ ಕರೆಗೆ ಅನುಗುಣವಾಗಿ ಮೊದಲ ವರ್ಷದ ಆಚರಣೆ 5 ದಿನ ವಿಜೃಂಭಣೆಯಿಂದ ನಡೆದಿತ್ತು. ಜನರು ಕೂಡ ಒಗ್ಗಟ್ಟಿನ ಮಂತ್ರ ಜಪಿಸುವುದರೊಂದಿಗೆ ಬ್ರಿಟೀಷ್ ದುರಾಡಳಿತದ ವಿರುದ್ಧ ದಂಗೆದಿದ್ದರು.

ಇದು ಬ್ರಿಟೀಷ್ ಅಧಿಕಾರಿಗಳ ಕೈಕೈ ಹಿಸುಕಿಕೊಳ್ಳುವಂತೆ ಮಾಡಿತ್ತು. ಹೀಗಾಗಿ ಗಣೇಶೋತ್ಸವ ನಡೆಯುತ್ತಿದ್ದ ತಾಲ್ಲೂಕಿಗೆ ಬ್ರಿಟೀಷ್ ಸೈನಿಕರನ್ನು ನುಗ್ಗಿಸುವ ಕುರಿತು ಬ್ರಿಟೀಷ್ ಅಧಿಕಾರಿಗಳು ನಿರ್ಧಾರ ಕೈಗೊಂಡಿದ್ದರು. ಈ ವಿಚಾರ ತಿಳಿದ ಗ್ರಾಮಸ್ಥರು ಗಣೇಶ ಮೂರ್ತಿಗೆ ಯಾವುದೇ ಧಕ್ಕೆಯಾಗಬಾರದು ಎಂದು ನಿರ್ಧರಿಸಿ

ಅಂದೇ ಮಧ್ಯಾಹ್ನದ ಹೊತ್ತಿಗೆ ಗ್ರಾಮದ ಹುಡೇದ ಬಾವಿಯಲ್ಲಿ ಗಣೇಶ ಮೂರ್ತಿಯನ್ನು ವಿಸರ್ಜಿಸಿದರು. ಅಂದಿನಿಂದ ಇಲ್ಲಿ ಪ್ರತಿವರ್ಷವೂ ಅರ್ಧ ದಿನ ಮಾತ್ರ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತದೆ. ಬೆಳಗ್ಗೆ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮಧ್ಯಾಹ್ನ ಊಟಕ್ಕೂ ಮೊದಲು ವಿಸರ್ಜಿಸಲಾಗುತ್ತದೆ.

**ಸಾವಿರಾರು ಕೋಟಿಯ ರೂಪಾಯಿ ಉದ್ಯಮವಾಗಿ ಬೆಳೆದ ಗಣೇಶೋತ್ಸವ**

ಸಾರ್ವಜನಿಕ ಗಣೇಶೋತ್ಸವ ಇಂದು ಭಾರತದಲ್ಲಿ ಸಾವಿರಾರು ಕೋಟಿ ರೂಪಾಯಿ ಉದ್ಯಮವಾಗಿ ಬೆಳೆದಿದೆ. ಸಾರ್ವಜನಿಕ ಗಣೇಶೋತ್ಸವ ನಡೆಸುವ ಸಂಘ ಸಂಸ್ಥೆಗಳು ನೂರಾರು ಕೋಟಿ ರೂಪಾಯಿ ಉಳಿತಾಯ ಮಾಡಿ ಹಲಾವಾರು ರೀತಿಯಲ್ಲಿ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿವೆ. ಗಣೇಶೋತ್ಸವ ಆಚರಣೆಯ ಸಮಯದಲ್ಲಿ ಹೂ, ಹಣ್ಣು, ತರಕಾರಿ ಸಹಿತ ಕೃಷಿ ಉತ್ಪನ್ನಗಳು, ಪೂಜಾ ಸಾಮಗ್ರಿಗಳು ಖರೀದಿಸಲು ನೂರಾರು ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತದೆ, ಗಣೇಶ ಮೂರ್ತಿ ತಯಾರಿಸುವ ಕುಶಲ ಕರ್ಮಿಗಳಿಗೆ ಕೈ ತುಂಬಾ ಕೆಲಸ. ಅಲಂಕಾರಿಕಾ ಸಾಮಗ್ರಿಗಳು ಹಾಗೂ ಮನರಂಜನಾ ಕ್ಷೇತ್ರದಲ್ಲೂ ದೊಡ್ಡ ಪ್ರಮಾಣದ ವ್ಯವಹಾರವಾಗುತ್ತದೆ. ಗಣೇಶೋತ್ಸವ ಭಾರತೀಯರಲ್ಲಿ ಹಬ್ಬದ ಸಡಗರದ ಜೊತೆಗೆ ದೊಡ್ಡ ಪ್ರಮಾಣದ ಆರ್ಥಿಕ ಚಟುವಟಿಕೆ ನಡೆಯಲು ಪ್ರೇರಣೆಯಾಗಿದೆ.

**ಪರಿಸರ ಸ್ನೇಹಿ ಗಣೇಶೋತ್ಸವಕ್ಕೆ ಒತ್ತು**

ಗಣೇಶೋತ್ಸವದ ಸಮಯದಲ್ಲಿ ಪರಿಸರ ಸ್ನೇಹಿ ಗಣೇಶಮೂರ್ತಿ ಪೂಜಿಸಿ ಎಂಬ ಕೂಗು ಎಲ್ಲೆಡೆಯಿಂದ ಕೇಳಿಬರುತ್ತದೆ. ಪರಿಸರ ಮಾಲಿನ್ಯದಿಂದ ಪ್ರತಿನಿತ್ಯ ಜನ ಜಾನುವಾರುಗಳು, ಪಶು, ಪಕ್ಷಿ, ಗಿಡಮರಗಳು ಅನುಭವಿಸುತ್ತಿರುವ ಸಮಸ್ಯೆಯನ್ನು ಮನಗಂಡ ಸರ್ಕಾರ ಪಿಒಪಿ ಗಣೇಶ ಮೂರ್ತಿ ತಯಾರಿಸುವುದು ಹಾಗೂ ಪೂಜೆ ಮಾಡುವುದಕ್ಕೆ ನಿಷೇಧ ವಿಧಿಸಿದೆ. ಪಿಒಪಿ ಗಣೇಶ ಮೂರ್ತಿ ತಯಾರಿಸುವವರು ಹಾಗೂ ಮಾರುವವರ ವಿರುದ್ಧ ಕಾನೂನು ಪ್ರಕಾರ ಕ್ರಮಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದೆ. ಪಿಒಪಿ ಗಣಪತಿ ಮೂರ್ತಿಗಳನ್ನು ನೀರಿನಲ್ಲಿ ವಿಸರ್ಜಿಸಿದಾಗ ಅದು ನೀರಲ್ಲಿ ಬೇಗ ಕರಗದು. ಜೊತೆಗೆ ಅದಕ್ಕೆ ಲೇಪಿಸಿದ ರಾಸಾಯನಿಕ ಬಣ್ಣಗಳಿಂದ ನೀರಲ್ಲಿರುವ ಜೀವ ಜಂತುಗಳ ಪ್ರಾಣಕ್ಕೆ ತೊಂದರೆಯಾಗುತ್ತದೆ. ಮಣ್ಣಿನ ಮೂರ್ತಿ ಬಳಸುವುದರಿಂದ ಅದು ನೀರಿನಲ್ಲಿ ಸಹಜವಾಗಿ ಕರಗಿ ಹೋಗುತ್ತದೆ. ಯಾವುದೇ ರೀತಿಯ ಸಮಸ್ಯೆಗಳು ಉದ್ಭವಿಸುವುದಿಲ್ಲ.

ಗಣೇಶ ಮೂರ್ತಿ ಹಾಗೂ ಮಂಟಪಗಳ ಅಲಂಕಾರಕ್ಕೆ ಥರ್ಮಾಕೋಲ್, ಪ್ಲಾಸ್ಟಿಕ್, ಫೈಬರ್, ಪ್ಲಾಸ್ಟರ್ ಆಫ್ ಪ್ಯಾರಿಸ್ ಮುಂತಾದ ವಸ್ತುಗಳನ್ನು ಬಳಸಬಾರದು. ಅಲಂಕರಿಸುವಾಗ ಕಾಗದ, ಮರ, ಬಟ್ಟೆ, ಸಾವಯವ ವರ್ಣಗಳು ಇತ್ಯಾದಿ ವಸ್ತುಗಳ ಬಳಕೆಯನ್ನು ಉತ್ತೇಜಿಸಬೇಕು. ಗಣೇಶ ಮೂರ್ತಿಗಳನ್ನು ನೀರಿನಲ್ಲಿ ಮುಳುಗಿಸುವುದನ್ನು ಪ್ರಸ್ತುತ ನಿಷೇಧಿಸಲಾಗಿರುವುದರಿಂದ, ಅವುಗಳನ್ನು ಮನೆಯಲ್ಲೇ ನೀರಿನ ತೊಟ್ಟಿಯಲ್ಲಿ ಮುಳುಗಿಸಬಹುದು, ಅವು ಕರಗಿದ ನಂತರ ಆ ನೀರನ್ನು ಗಿಡಗಳಿಗೆ ಹಾಕಬಹುದು. ಅರಿಶಿನ, ಗೋರಂಟಿ,



ಮೆಹೆಂದಿ, ಅಕ್ಕಿ ಪುಡಿ ಮತ್ತು ಗುಲಾಲ್‌ನಂತಹ ನೈಸರ್ಗಿಕ ಬಣ್ಣಗಳಿಂದ ರಂಗೋಲಿಯನ್ನು ತಯಾರಿಸಿ. ಅಂತಹ ಬಣ್ಣಗಳು ಪರಿಸರ ಅಥವಾ ಮಾನವನ ಆರೋಗ್ಯದ ಮೇಲೆ ಯಾವುದೇ ಋಣಾತ್ಮಕ ಪರಿಣಾಮಗಳನ್ನು ಬೀರುವುದಿಲ್ಲ. ನೈವೇದ್ಯ, ಪ್ರಸಾದ, ಪೆಂಡಾಲ್‌ಗಳಿಗೆ ತಂದ ವಸ್ತುಗಳನ್ನು ಚೆಲ್ಲಾಪಿಲ್ಲಿಯಾಗಿ ಎಸೆದು. ಅದನ್ನು ನಿರ್ಲಕ್ಷಿಸಿದರೆ ಪರಿಸರವನ್ನು ಕಲುಷಿತಗೊಳಿಸುತ್ತದೆ. ಆದ್ದರಿಂದ, ಪ್ಲಾಸ್ಟಿಕ್ ಚೀಲಗಳನ್ನು ತಿರಸ್ಕರಿಸಿ. ಬದಲಿಗೆ ಬಟ್ಟೆ ಚೀಲಗಳ ಬಳಕೆಯನ್ನು ಪ್ರೋತ್ಸಾಹಿಸಬೇಕು. ಮರುಬಳಕೆ ಮಾಡಬಹುದಾದಂತವುಗಳನ್ನು ಬಳಸಬೇಕು.

**ನೆರೆಹೊರೆಯವರ ಮನಸ್ಸಿಗೆ ಘಾಸಿಯಾಗದಿರಲಿ**

ಜನರಿಗೆ ತೊಂದರೆ ನೀಡುವಂತೆ ಕಿವಿಗಡಚ್ಚಿಕ್ಕುವ ಸಂಗೀತವನ್ನು ನುಡಿಸುವುದರ ಬದಲಾಗಿ, ಮೃದಂಗ, ತಬಲಾ ಮತ್ತು ಇತರ ಸಾಂಪ್ರದಾಯಿಕ ದೇಶಿಯ ವಾದ್ಯಗಳನ್ನು ಬಳಸಿದರೆ ಅದರ ಸಂಗೀತ ಕಿವಿಗೆ ಮುದನೀಡುತ್ತದೆ. ಉತ್ಸವಕ್ಕೂ ಹಬ್ಬದ ಕಳೆಬರುತ್ತದೆ. ಬೆಳಿಗ್ಗೆ 6 ರಿಂದ ರಾತ್ರಿ 10ರ ನಡುವೆ, ಸ್ಪೀಕರ್‌ಗಳು ಮತ್ತು ಮೈಕ್ರೊಫೋನ್‌ಗಳನ್ನು ಬಳಸುವ ಮೂಲಕ ನೆರೆಹೊರೆಯವರಿಗೆ ಆಗುವ ತೊಂದರೆ ತಪ್ಪಿಸಬೇಕು. ಪಟಾಕಿ ಸಿಡಿಸುವುದರಿಂದ ಸಮುದಾಯದ ಚಿಕ್ಕ ಮಕ್ಕಳು ಮತ್ತು ವೃದ್ಧರಿಗೆ ಶ್ರವಣದೋಷ ಉಂಟಾಗುತ್ತದೆ. ಪಟಾಕಿಗಳು ವಿಷಕಾರಿ ಹೊಗೆಯನ್ನು ಹೊರಸೂಸುತ್ತವೆ ಅದು ಆರೋಗ್ಯ ಹಾಗೂ ಪರಿಸರಕ್ಕೆ ಹಾನಿಕಾರಕವಾಗಿದೆ. ರೋಗಿಗಳ ಸುರಕ್ಷತೆ ಮತ್ತು ಸಾರ್ವಜನಿಕ ಆರೋಗ್ಯ ಎರಡನ್ನೂ ಗಮನದಲ್ಲಿರಿಸಿದರೆ ಒಳ್ಳೆಯದು.

ಗಣೇಶ ಮೂರ್ತಿಗಳನ್ನು ಮುಳುಗಿಸಲು ಬಳಸಿದ ನೀರನ್ನು ನೀರಾವರಿ ಮತ್ತು ಕುಡಿಯಲು ಸಹ ಬಳಸಿಕೊಳ್ಳಲಾಗುತ್ತದೆ, ಇದು ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಉಂಟುಮಾಡಬಹುದು. ನದಿ, ಸರೋವರ ಅಥವಾ ಕೊಳದಂತಹ ನೈಸರ್ಗಿಕ ನೀರಿನ ಸರಬರಾಜನ್ನು ಗಣೇಶಮೂರ್ತಿ ಮುಳುಗಿಸಲು ಬಳಸುವ ಬದಲು, ಕೃತಕ ಟ್ಯಾಂಕ್ ಅಥವಾ ಕೃತಕ ಇಮ್ಮರ್ಶನ್ ಟ್ಯಾಂಕ್ ಅನ್ನು ಬಳಸಿದರೆ ಒಳ್ಳೆಯದು.

ಒಟ್ಟಿನಲ್ಲಿ ನೂರಾರು ವರ್ಷಗಳಿಂದ ನಾವೆಲ್ಲರೂ ಏಕತೆ, ಸೌಹಾರ್ದತೆ ಹಾಗೂ ಸಾಮರಸ್ಯದ ಸಂಕೇತವಾಗಿ ಆಚರಿಸಿಕೊಂಡು ಬರುತ್ತಿರುವ ಗಣೇಶ ಚತುರ್ಥಿಗೆ ಮತ್ತಷ್ಟು ರಂಗು ನೀಡೋಣ.. ಒಟ್ಟಾಗಿ ಪೂಜಿಸೋಣ... ಸಂಭ್ರಮಿಸೋಣ.. ಅಲ್ಲವೇ...!? ▸▸ **ಸವಿತಾ ನಾಯ್ಕ್**

# ಠೇವಣಿ ವಿಮೆ : ಖಾತೆದಾರರಿಗೇನು ಪ್ರಯೋಜನ?

▸▸ ನಾರಾಯಣಯಾಜಿ ಶಿರಾಲಿ, ವಕೀಲರು

ಈಗ್ಗೆ ಸುಮಾರು ನಲ್ವತ್ತಾರು (46) ವರ್ಷಗಳ ಹಿಂದೆ ಸ್ಥಾಪಿತ (ಅಂದರೆ ದಿನಾಂಕ: 15.7.1978 ರಲ್ಲಿ) ಮುಂಬಯಿಯಲ್ಲಿ ಕೇಂದ್ರಕಛೇರಿ ಇರುವ, ಭಾರತದ ಅತ್ಯುನ್ನತ ಬ್ಯಾಂಕಾದ ರಿಜರ್ವ್ ಬ್ಯಾಂಕಿನ ಅಂಗ ಸಂಸ್ಥೆಯಾದ "ಡೆಪಾಜಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್ ಆಫ್ ಇಂಡಿಯಾ (DICGC)" ಬ್ಯಾಂಕುಗಳ ಸಣ್ಣ ಸಣ್ಣಗ್ರಾಹಕರಿಗೆ "ವರದಾನ"ವಾಗಿ ಕೆಲಸ ಮಾಡುತ್ತಿದೆ. ಅಂದರೆ, ಕೆಲವು ನಿರ್ದಿಷ್ಟ ಬ್ಯಾಂಕುಗಳಲ್ಲಿ ಗ್ರಾಹಕರು ಮಾಡುವಠೇವಣಿ ಹಣಕ್ಕೆ ನಿರ್ದಿಷ್ಟ ಮಿತಿಯವರೆಗೆ (ಈಗ ರೂ. ಐದು ಲಕ್ಷದವರೆಗೆ) ಸಂಪೂರ್ಣ ವಿಮಾ ಸೌಲಭ್ಯ ಅಂದರೆ, ಭದ್ರತೆ ನೀಡಿ ಅಂತಹ ಬಡಪಾಯಿ ಸಣ್ಣ ಸಣ್ಣಖಾತೆದಾರರನ್ನು ರಕ್ಷಿಸುತ್ತಿದೆ. ಇದುವೇ "ಠೇವಣಿ ವಿಮೆ" (Deposit Insurance).

**ಅನ್ವಯಿಸುವ ಕಾನೂನು :** ಈ ಯೋಜನೆಗೆ ಅನ್ವಯವಾಗುವ ಕಾಯ್ದೆಯ ನಾಮಧೇಯ "ಡೆಪಾಸಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಕಾರ್ಪೋರೇಷನ್ ಆಫ್ ಇಂಡಿಯಾ ಕಾಯ್ದೆ 1961 (DICGC Act, 1961)."

**ಈ ವಿಮೆಗೆ ಒಳಪಟ್ಟ ಬ್ಯಾಂಕುಗಳು :** "ಈ ಬ್ಯಾಂಕುಠೇವಣಿ ವಿಮೆಯ ಭದ್ರತೆಗೆ ಒಳಪಟ್ಟಿದೆ" ಎಂಬ ನಾಮಫಲಕವನ್ನು ಕೆಲವು ಬ್ಯಾಂಕುಗಳಲ್ಲಿ ನೋಡಬಹುದಾಗಿದೆ. ಎಲ್ಲ ವಾಣಿಜ್ಯ ಬ್ಯಾಂಕುಗಳು, ಸ್ಥಳೀಯ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು ಮತ್ತುಎಲ್ಲ ಸಹಕಾರ ಬ್ಯಾಂಕುಗಳು ಈ ವಿಮೆಯ ಭದ್ರತೆಗೆ ಒಳಪಟ್ಟಿರುವ ಕಾರಣ ಇಲ್ಲಿಯ ಸಣ್ಣಮಟ್ಟ ಗ್ರಾಹಕರು ಮೇಲೆ ಹೇಳಿದಂತೆ ರಕ್ಷಿತರು.

ಪ್ರಾಥಮಿಕ ಸಂಘಗಳು (PACS), ನಾನ್ ಬ್ಯಾಂಕಿಂಗ್ ಆರ್ಥಿಕ ಸಂಸ್ಥೆಗಳು (NBFCS), ಮ್ಯೂಚ್ಯುವಲ್ ಫಂಡ್ಸ್ (ಒಇ) ಈ ಸೌಕರ್ಯಕ್ಕೆ ಒಳಪಟ್ಟಿಲ್ಲ.

**ಈ ಠೇವಣಿ ವಿಮಾ ನಿಗಮ ಏನನ್ನು ಖಾತ್ರಿಗೊಳಿಸುತ್ತದೆ? :** ಈ ವಿಮೆಗೊಳಪಟ್ಟ ಬ್ಯಾಂಕುಗಳು ಸಮಾಪನ (Liquidation) ಆದಾಗ, ಭಾರತದಲ್ಲಿ ಪಾವತಿಸತಕ್ಕ, ಈ ಮುಂದೆ ಹೇಳುವ ಹಣವನ್ನುಗ್ರಾಹಕರಿಗೆ ಮರುಪಾವತಿ (Refund) ಮಾಡುವುದಾಗಿ "ಗ್ಯಾರಂಟಿ" (ಖಾತರಿ) ನೀಡುತ್ತದೆ. ಚಾಲ್ತಿ ಖಾತೆ, ಉಳಿತಾಯ ಖಾತೆ, ರಿಕವರಿಂಗ್‌ಖಾತೆ, ಮುದ್ದತುಖಾತೆ... ಇತ್ಯಾದಿ ಎಲ್ಲ ಖಾತೆಗಳಿಗೆ ಈ ಸೌಲಭ್ಯಇದೆ. ಆದರೆ,

i) ವಿದೇಶಿ ಸರ್ಕಾರದ ಠೇವಣಿಗಳಿಗೆ

ii) ರಾಜ್ಯ/ಕೇಂದ್ರ ಸರ್ಕಾರದ ಠೇವಣಿಗಳಿಗೆ

iii) ಅಂತರ ಬ್ಯಾಂಕ್ ಠೇವಣಿಗಳಿಗೆ

iv) ರಾಜ್ಯ ಸಹಕಾರ ಬ್ಯಾಂಕಿನಲ್ಲಿಇಟ್ಟಿರುವರಾಜ್ಯ ಭೂ ಬ್ಯಾಂಕಿನ ಠೇವಣಿಗಳಿಗೆ ಮತ್ತು

v) ರಿಜರ್ವ್ ಬ್ಯಾಂಕಿನಿಂದ "ವಿಮೆಗೊಳಪಡುವುದಿಲ್ಲ" ಎಂದು ಪೂರ್ವನಿರ್ಧರಿತ ಠೇವಣಿಗಳಿಗೆ ಈ ಗ್ಯಾರಂಟಿ/ಖಾತರಿ ಇಲ್ಲ.

**ವಿಮೆಯಗರಿಷ್ಠ ಮೊಬಲಗು :** ಈ ವಿಮಾಯೋಜನೆಯಲ್ಲಿ ವಿಮೆಗೊಳಪಡುವ ಗರಿಷ್ಠ ಮೊತ್ತ ಆಗಾಗ ಬದಲಾಗುತ್ತಾಇರುತ್ತದೆ. ಹಾಲಿ ಈ ಮೊತ್ತರೂ. ಐದು ಲಕ್ಷ ಇದೆ. ಈ ಹಿಂದೆ ಈ ಮೊತ್ತರೂ. ಒಂದು ಲಕ್ಷ ಇತ್ತು.

**ವಿಮಾ ಕಂಪನಿಯಿಂದ ನೊಂದ ಗ್ರಾಹಕರಿಗೆ ಹಣಯಾವಾಗ ಸಿಗುತ್ತದೆ?**

ಆ ಗ್ರಾಹಕನ ಠೇವಣಿ ಇಡುವ ಬ್ಯಾಂಕು ಪರಿಸಮಾಪ್ತಿಯಾದಾಗ (Liquidation), ಆ ಬ್ಯಾಂಕಿಗೆ ಪರಿಸಮಾಪ್ತಿಗಾರನ ನೇಮಕ ಆಗುತ್ತದೆ. ಆ ಪರಿಸಮಾಪ್ತಿಗಾರ (Liquidator) ನೀಡಿದ ಸಂಬಂಧಿತ ಬ್ಯಾಂಕಿನ ಗ್ರಾಹಕರ ಹಕ್ಕಿನ ವರದಿ (Claim list) ಯನ್ನು ಈ ಮೇಲೆ ಹೇಳಿದ ವಿಮಾ ಕಂಪನಿ ಸ್ವೀಕರಿಸಿದ ನಂತರ, ಕೇವಲ ಎರಡು ತಿಂಗಳೊಳಗೆ (60 ದಿನಗಳು) ಈ ಕಂಪನಿ ರೂ. ಐದು ಲಕ್ಷದವರೆಗಿನಗ್ರಾಹಕರ ಹಣವನ್ನು ಪಾವತಿ ಮಾಡುತ್ತದೆ.

**ಬೇರೆ ಬೇರೆ ಬ್ಯಾಂಕುಗಳಲ್ಲಿರುವ ಠೇವಣಿಗಳ ಪರಿಸ್ಥಿತಿ :** ವಿವಿಧ ಬ್ಯಾಂಕುಗಳಲ್ಲಿ ಇರುವಗ್ರಾಹಕನ ಠೇವಣಿಗಳಿಗೆ, ಪ್ರತಿ ಬ್ಯಾಂಕಿನಲ್ಲೂರೂ. ಐದು ಲಕ್ಷದವರೆಗೆ 'ವಿಮಾಗ್ಯಾರಂಟಿ' ಇದೆ.

**ಕೆಲವು ನಿಬಂಧನೆಗಳು :** ಈ ವಿಮೆಗೊಳ್ಳಪಟ್ಟ ಬ್ಯಾಂಕು ನಂತರದ ದಿನಗಳಲ್ಲಿ ಈ ಯೋಜನೆಯಿಂದ ಹಿಂದೆ ಸರಿಯುವಂತಿಲ್ಲ.

ಈ ವಿಮಾ ನಿಗಮಕ್ಕೆ (ಕಂಪನಿಗೆ) ಸಂಬಂಧಿಸಿದ ಬ್ಯಾಂಕೇ ಪ್ರತಿವರ್ಷ ವಿಮಾಕಂತು (Premium) ಕಟ್ಟತಕ್ಕದ್ದು. ಸತತವಾಗಿ ಒಂದೂವರೆ (11/2) ವರ್ಷ ವಿಮಾ ಹಣಕಟ್ಟದೇಇದ್ದರೆ, ಅಥವಾ ಯಾವುದೇ ಬ್ಯಾಂಕಿನ ಲೈಸೆನ್ಸ್‌ರದ್ಧತಿ ಆದರೆ, ಆಗ ಈ ಕಂಪನಿಯುಅಂತಹ ಬ್ಯಾಂಕಿನ ವಿಮಾ ಸೌಲಭ್ಯವನ್ನು ರದ್ದುಗೊಳಿಸುತ್ತದೆ. ಹಾಗೂ ಈ ಬಗ್ಗೆ ಸ್ಥಳೀಯ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಸಾರ್ವಜನಿಕರ ಗಮನಕ್ಕೆ ತರುತ್ತದೆ.

**ಜಂಟಿ ಖಾತೆಗಳ ಠೇವಣಿಗಳ ಪರಿಸ್ಥಿತಿ :** ಈರ್ವರುಅಥವಾ ಹೆಚ್ಚಿನಗ್ರಾಹಕರು ಯಾವುದೇಒಂದು ಬ್ಯಾಂಕಿನಲ್ಲಿ ಉಳಿತಾಯ, ಚಾಲ್ತಿ, ಮುದ್ದತು... ಇಂತಹ ಠೇವಣಿಗಳನ್ನು ತೆರೆದು, ಎಲ್ಲಾ ಖಾತೆಗಳಲ್ಲಿ ಹೆಸರುಅನುಕ್ರಮವಾಗಿಂ, ಃ, ಅ.....ಎಂದೇ ಎಲ್ಲ ರೀತಿಯ ಖಾತೆಗಳಲ್ಲೂ ಇದ್ದರೆ, ಅವೆಲ್ಲ ಖಾತೆಗಳಲ್ಲಿರುವ ಒಟ್ಟು ಮೊತ್ತಕ್ಕೆರೂ. ಐದು ಲಕ್ಷದವರೆಗೆ ಮಾತ್ರವೇಠೇವಣಿ ವಿಮೆ ಲಭ್ಯ.

ಮೇಲಿನ ಉದಾಹರಣೆಗಳಲ್ಲಿ, ಈ ಖಾತಾದಾರರು ಬುದ್ಧಿವಂತಿಕೆಯಿಂದ (ತಲೆ ಓಡಿಸಿ) ಇನ್ನೊಂದುಖಾತೆಯನ್ನು

B, A, ಅ... ಎಂತಲೂ, ಮತ್ತೊಂದು ಖಾತೆಯನ್ನು C, A, B... ಹೆಸರಿನಲ್ಲಿ ತೆರೆದಿದ್ದರೆ, ಅವರ ಸಾಮರ್ಥ್ಯ (Capacity) ಬೇರೆ ಬೇರೆಎಂದು ಪರಿಗಣಿಸಲ್ಪಟ್ಟ, ಪ್ರತ್ಯೇಕ ಪ್ರತ್ಯೇಕವಾಗಿಅವರಿಗೆ ಈ ಎಲ್ಲ ಖಾತೆಗಳಿಗೂ ತಲಾರೂ. ಐದು ಲಕ್ಷದವರೆಗೆ ವಿಮಾ ಹಣ ಲಭ್ಯ. ಸಹಕಾರ ಬ್ಯಾಂಕುಗಳಲ್ಲಿ ಸಾಮಾನ್ಯವಾಗಿ, ಈ ಗ್ರಾಹಕ ಸ್ನೇಹಿ ಪದ್ಧತಿಯನ್ನು ಬ್ಯಾಂಕಿನವರೇ ತಮ್ಮ "ಗ್ರಾಹಕರೇ ದೇವರೆಂದು ತಿಳಿದು" ಅವರಿಗೆ ಈ ನಿಟ್ಟಿನಲ್ಲಿ ಸಹಾಯಹಸ್ತ ಸ್ವತಃಚಾಚುವುದನ್ನು ನಾನು ಅದೆಷ್ಟೋ ಸಹಕಾರಿ ಬ್ಯಾಂಕುಗಳಲ್ಲಿ ನೋಡಿದ್ದೇನೆ.

ಹಾಗೆಯೇಯವನೇ ವ್ಯಕ್ತಿ ಪಾರ್ಟನರ್ ಆಗಿ, ಇನ್ನೊಂದರಲ್ಲಿ ಪೋಷಕನಾಗಿ, ಮತ್ತೊಂದರಲ್ಲಿ ಕಂಪನಿಯ ನಿರ್ದೇಶಕನಾಗಿ.... ಇತ್ಯಾದಿ ಬೇರೆ ಬೇರೆ ಸಾಮರ್ಥ್ಯ (Capacity)ದಲ್ಲಿ ಖಾತೆ ತೆರೆದರೂ ಸಹ, ಆ ಗ್ರಾಹಕನಿಗೆ ವಿಮೆ ಕಂಪನಿ, ಪ್ರತಿಖಾತೆಗೂತಲಾರೂ. ಐದು ಲಕ್ಷದವರೆಗೆ (ಆಯಾ ಖಾತೆಗಳ್ಲಲಿರುವ ಹಣದ ಮೊಬಲಗಿಗೆ ತಕ್ಕಂತೆ) ಪಾವತಿಸುತ್ತದೆ.

ವಿಳಾಸ, ದೂರವಾಣಿ... ಈ ವಿಮಾ ಸಂಸ್ಥೆಗೆ ಪತ್ರಿಸುವಾಗ ಆಂಗ್ಲ ಭಾಷೆಯಲ್ಲಿ ವ್ಯವಹರಿಸಬೇಕು.

**ವಿಳಾಸ:**

**DEPOSIT INSURANCE AND CREDIT GUARANTEE CORPORATION**
**Shooraji Vallabhadas Marg**
**Ballard Estate, MUMBAI - 400001**
**Website: www.dicgc.org.in**
**Telephone : 022-23062161, 022-23028218, 022-23028231**

## CIBIL Score - CIBIL Report ನಡುವಿನ ವ್ಯತ್ಯಾಸವೇನು? ಇಲ್ಲಿದೆ ಪೂರ್ಣ ಮಾಹಿತಿ...

**ನವದೆಹಲಿ** : ಕ್ರೆಡಿಟ್ ಕಾರ್ಡ್, ಮನೆ ಸಾಲ, ವಾಹನ ಸಾಲ ಹೀಗೆ ಆರ್ಥಿಕ ನೆರವು ನೀಡುವ ಯಾವುದೇ ಹಣಕಾಸು ಸಂಸ್ಥೆಯು ವ್ಯಕ್ತಿಯ ಸಾಲ ಭರಿಸುವ ಸಾಮರ್ಥ್ಯ ನೋಡುವುದು ಸಾಮಾನ್ಯ. ಹಾಗಿದ್ದರೆ ಸಿಬಿಲ್ ಸ್ಕೋರ್ ಅಥವಾ ಸಿಬಿಲ್ ವರದಿ... ಈ ಎರಡರಲ್ಲಿ ಯಾವುದನ್ನು ಪರಿಗಣಿಸಲಾಗುವುದು ಎಂಬ ಗೊಂದಲ ಇದ್ದೇ ಇದೆ.

ಸಿಬಿಲ್ ಜೊತೆಗೆ ಇರುವ ಈ ಎರಡು ಪದಗಳು ಸದಾ ನಮ್ಮಲ್ಲಿ ಗೊಂದಲ ಉಂಟು ಮಾಡುತ್ತವೆ. ಹಲವರು ಈ ಎರಡನ್ನೂ ಒಂದೊಕ್ಕೊಂದು ಪರಸ್ಪರ ತಪ್ಪಾಗಿ ಅರ್ಥೈಸಿಕೊಂಡ ಉದಾಹರಣೆಗಳೂ ಇವೆ. ಆದರೆ ವ್ಯಕ್ತಿಯ ಹಣಕಾಸಿನ ಪಯಣದಲ್ಲಿ ಸಿಬಿಲ್ ಸ್ಕೋರ್ ಮತ್ತು ಸಿಬಿಲ್ ವರದಿ ಎರಡೂ ಪ್ರಮುಖ ಪಾತ್ರ ವಹಿಸುತ್ತವೆ.

**ಸಿಬಿಲ್ ಸ್ಕೋರ್ :** ಸಾಲ ಮರುಪಾವತಿಯ ಸಾಂಖಿಕ ಪ್ರಾತಿನಿಧಿತ್ವವೇ ಸಿಬಿಲ್ ಸ್ಕೋರ್. ಇದು 300 ರಿಂದ 900ರವರೆಗೂ ಇದ್ದು, ಸಾಲ ಪಡೆಯುವ ಸಾಮರ್ಥ್ಯವನ್ನು ತಿಳಿಸುತ್ತವೆ. ಸಾಲ ಪಡೆದ ಹಾಗೂ ಸಾಲ ಮರು ಪಾವತಿಸಿದ ಈ ಹಿಂದಿನ ವರದಿಗಳನ್ನು ಆಧರಿಸಿ ಈ ಸಂಖ್ಯೆಯಲ್ಲಿ ಏರಿಳಿತ ಆಗುತ್ತಿರುತ್ತದೆ. ಸಕಾಲಕ್ಕೆ ಸಾಲ ಮರುಪಾವತಿ, ಸಾಲ ಬಳಕೆಯ ಪ್ರಮಾಣ, ಯಾವೆಲ್ಲಾ ಉದ್ದೇಶಗಳಿಗೆ ಸಾಲ ಪಡೆಯಲಾಗಿದೆ ಎಂಬುದನ್ನು ಇದು ಪರಿಗಣಿಸಿ ಸಿಬಿಲ್ ಸ್ಕೋರ್ ದಾಖಲಾಗುತ್ತದೆ. ಸಾಲ ಕೊಡುವ ಹಣಕಾಸು ಸಂಸ್ಥೆಯು ಈ ಸಂಖ್ಯೆಯನ್ನೇ ಅವಲಂಬಿಸಿ ಸಾಲ ನೀಡುತ್ತದೆ.

ಅಂದರೆ, ವ್ಯಕ್ತಿಯ ಸಿಬಿಲ್ ಸ್ಕೋರ್ ಹೆಚ್ಚಿದ್ದಷ್ಟೂ, ಹಣಕಾಸು ಸಂಸ್ಥೆಗೆ ಸಾಲ ಮರಳಿ ಬರುವ ಚಿಂತೆ ಕಡಿಮೆ ಎಂದರ್ಥ. ಇಂಥವರು ಹಣಕಾಸು ಸಂಸ್ಥೆಗೆ ಅಚ್ಚುಮೆಚ್ಚು. ಸಿಬಿಲ್ ಸ್ಕೋರ್ ಉಚಿತವಾಗಿ ನೀಡುವ ಬಹಳಷ್ಟು ಅಂತರ್ಜಾಲ ತಾಣಗಳು ಇವೆ. ಇದರ ಮೂಲಕ ಸಿಬಿಲ್ ವರದಿಯನ್ನು ಪಡೆಯಲು ಸಾಧ್ಯ.

**ಸಿಬಿಲ್ ರಿಪೋರ್ಟ್ :** ಸಾಲ ಪಡೆದ ಹಾಗೂ ಅದನ್ನು ಮರು ಪಾವತಿಸಿದ ವಿವರವಾದ ವರದಿಯೇ ಸಿಬಿಲ್ ರಿಪೋರ್ಟ್. ಇದರಲ್ಲಿ



ಸದ್ಯ ಚಾಲ್ತಿಯಲ್ಲಿರುವ ಸಾಲ ಹಾಗೂ ಹಿಂದೆ ಪಡೆದು, ತೀರಿಸಿದ ಅಥವಾ ತೀರಿಸಲಾಗದ ಸಾಲ ಸೇರಿದಂತೆ ಎಲ್ಲಾ ವರದಿಗಳೂ ಇರಲಿವೆ. ಹೀಗಾಗಿ ಸಿಬಿಲ್ ವರದಿಯು ವ್ಯಕ್ತಿಯ ಸಾಲ ಪಡೆಯುವ ಕ್ರಮ, ಅದನ್ನು ತೀರಿಸಿದ ರೀತಿ ಕುರಿತ ಸಮಗ್ರ ವರದಿಯನ್ನು ಒಳಗೊಂಡಿರುತ್ತದೆ. ಇದರೊಂದಿಗೆ ವೈಯಕ್ತಿಕ ಮಾಹಿತಿಯಾದ ಹೆಸರು, ವಿಳಾಸ, ಪಾನ್ ವಿವರಗಳೂ ಇರಲಿವೆ.

ಸಿಬಿಲ್ ಸ್ಕೋರ್ ಎನ್ನುವುದು ಆ ತಕ್ಷಣಕ್ಕೆ ವ್ಯಕ್ತಿಯ ಸಾಲ ಮರುಪಾವತಿಯ ಸಾಮರ್ಥ್ಯ ನೋಡಲು ಪಡೆಯಬಹುದಾದ ಅಂಕಿಅಂಶ. ಆದರೆ ಸಾಲ ನೀಡುವ ಮೊದಲು ಹಣಕಾಸು ಸಂಸ್ಥೆಯೊಂದು ಅರ್ಜಿದಾರರ ಕುರಿತು ಸಂಪೂರ್ಣ ದಾಖಲಾತಿ ಪರಿಶೀಲಿಸುವ ಸಂದರ್ಭದಲ್ಲಿ ಸಿಬಿಲ್ ವರದಿಯನ್ನು ನೋಡುತ್ತದೆ. ಅದನ್ನು ಆಧರಿಸಿ ಸಾಲದ ಮೊತ್ತ ಹಾಗೂ ಮಿತಿ ನಿರ್ಧಾರವಾಗಲಿದೆ.

ಹೀಗಾಗಿ ಆರ್ಥಿಕವಾಗಿ ಸದೃಢರಾಗಿರಬೇಕೆಂದರೆ ವ್ಯಕ್ತಿಯ ಸಿಬಿಲ್ ಸ್ಕೋರ್ ಮತ್ತು ಸಿಬಿಲ್ ವರದಿ ಎರಡೂ ಉತ್ತಮವಾಗಿರಬೇಕು. ಜತೆಗೆ ಸಿಬಿಲ್ ವರದಿ ಮೂಲಕ ನಮ್ಮ ಹಣಕಾಸಿನ ವ್ಯವಹಾರವನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯ. ಆ ಮೂಲಕ ಸಿಬಿಲ್ ಸ್ಕೋರ್ ಹೆಚ್ಚಿಸಿಕೊಳ್ಳಬಹುದು.

# ಪರಿವರ್ತನೆಯ ಹರಿಕಾರ ದೇವರಾಜು ಅರಸು –
## ಅರಸು ಜನ್ಮದಿನದ ಪ್ರಯುಕ್ತ ವಿಶೇಷ ಲೇಖನ

**ಕರ್ನಾಟಕದಲ್ಲಿ ಅನೇಕ ಮುಖ್ಯಮಂತ್ರಿಗಳು ಆಗಿ ಹೋಗಿದ್ದಾರೆ. ಇವರಲ್ಲಿ ಕೆಲವರು ಮಾತ್ರ ಸದಾ ನಮ್ಮ ನೆನಪಿನಲ್ಲಿರುತ್ತಾರೆ. ಕೆಲವು ರಾಜಕಾರಣಿಗಳು ತಮ್ಮ ಪ್ರಯತ್ನದಿಂದ ನಾಡಿಗೆ ಹೊಸ ರೂಪ ಕೊಡಲು ಪ್ರಯತ್ನಿಸಿ ಸಫಲರಾಗುತ್ತಾರೆ. ಇವರನ್ನು ನಾವು ಸದಾ ಮನದಾಳದಲ್ಲಿ ಜೋಪಾನವಾಗಿಟ್ಟುಕೊಂಡು ಸ್ಮರಿಸುತ್ತೇವೆ ಇಂತಹ ವ್ಯಕ್ತಿಗಳ ಪೈಕಿ ದಿವಂಗತ ದೇವರಾಜ್ ಅರಸರು ಅಗ್ರಗಣ್ಯರು ಮಹತ್ತರ ಬದಲಾವಣೆ ಮಾಡಿ ನಮ್ಮ ಸಮಾಜಕ್ಕೆ ಬೆಲೆ ಬಾಳುವ ಉಡುಗೊರೆ ಕೊಟ್ಟು ನಿರ್ಗಮಿಸಿದ ಅರಸರು ಮಾಮೂಲಿ ರಾಜಕಾರಣಿಯಲ್ಲ. ಇವರನ್ನು ಒಂದು ರೀತಿಯಲ್ಲಿ ಬಣ್ಣಿಸುವುದಾದರೆ ಧೈರ್ಯ ರಾಜಕಾರಣಿ ಎಂದು ಬಣ್ಣಿಸಬಹುದು. ಮೈಸೂರು ಜಿಲ್ಲೆ, ಹುಣಸೂರು ತಾಲೂಕಿನ ಕಲ್ಲಹಳ್ಳಿಯ ದೇವರಾಜ್ ಜೆ.ವಿ.ರಾಮನ್ ದಂಪತಿಗಳಿಗೆ 1915 ಆಗಸ್ಟ್ 20ರಂದು ಜನಿಸಿದ ಮಗುವೇ ದೇವರಾಜ ಅರಸು. ಸ್ವಗ್ರಾಮದಲ್ಲಿ ವಿದ್ಯಾಭ್ಯಾಸ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿಎಸ್ಸಿ ಪದವಿ ನಂತರ ಕೃಷಿ ಜೊತೆ ಗರಡಿ ಮನೆಯಲ್ಲಿ ತಾಲೀಮು. 1941 ರಂದು ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಆಯ್ಕೆಯಾದ ಅರಸರು ಸ್ವಾತಂತ್ರ ನಂತರ 1952ರಲ್ಲಿ ನಡೆದ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಹುಣಸೂರು ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿದದರು.**



ಮಾರ್ಕ್ಸ್‌ನನ್ನು ಅವರು ಅಧ್ಯಯನ ಮಾಡಲಿಲ್ಲ. ಸಮಾಜವಾದದ ಬಗ್ಗೆ ಸುಧೀರ್ಘ ಭಾಷಣ ಬಿಗಯಲಿಲ್ಲ ಆದರೆ ಕರ್ನಾಟಕದಲ್ಲಿ ಮಹತ್ತರವಾದ ಬದಲಾವಣೆ ತಂದು ಹೆಸರುವಾಸಿಯಾದರು. ಹೆಪ್ಪುಗಟ್ಟಿದ್ದ ನಾಡಿನ ಇತಿಹಾಸ ಚಕ್ರವನ್ನು ತಿರುಗಿಸಿದರು. ಈ ಪ್ರಯತ್ನದಲ್ಲಿ ಅವರು ಸಫಲರು ಆದರು. ಜಾತಿಗಳಲ್ಲಿ ಅಸಮಾನತೆ ಹಿಂದುಳಿದವರ್ಗದ ಅಸಹನೀಯ ಬದುಕನ್ನು ದೇವರಾಜ್ ಅರಸರು ಗುರುತಿಸಿದರು ಕರ್ನಾಟಕದ ರೂಪುರೇಷೆಯನ್ನು ಬದಲಾಯಿಸಿ ಅಪಾರ ಸಂಖ್ಯೆಯ ಹಿಂದುಳಿದ ವರ್ಗಕ್ಕೆ ರಾಜಕೀಯ ಶಕ್ತಿ ಕೊಟ್ಟಿದ್ದು ಇದೇ ಅರಸರು. 1962ರಲ್ಲಿ ಎಸ್. ನಿಜಲಿಂಗಪ್ಪರವರು ಮಂತ್ರಿಮಂಡಲದಲ್ಲಿ ಸಚಿವರಾಗಿ ದಕ್ಷತೆ ಮೆರೆದ ದೇವರಾಜ್ ಅರಸರು ನಂತರ ವೀರೇಂದ್ರ ಪಾಟೀಲ್ ಮಂತ್ರಿಮಂಡಲದಲ್ಲೂ ಸಚಿವರಾದ ಅರಸರು 1972ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದರಲ್ಲದೆ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ತತ್ವದಲ್ಲಿ ನಂಬಿಕೆ ಹೊಂದಿದ್ದ ಅವರು ಧ್ವನಿ ಇಲ್ಲದವರಿಗೆ ಧ್ವನಿಯಾದರೂ ಅವರ ಸಚಿವ ಸಂಪುಟದಲ್ಲಿ ದಲಿತ ಸಮುದಾಯದ ಬಿ. ಬಸವಲಿಂಗಪ್ಪ, ಕೆ.ಎಚ್. ರಂಗನಾಥ್, ಎನ್ ರಾಚಯ್ಯ, ಹಿಂದುಳಿದ ಜಾತಿಯ ಬಂಗಾರಪ್ಪ, ಎಸ್.ಬಿ. ಹಾವನೂರು, ಎಂ. ವೀರಪ್ಪ ಮೊಯ್ಲಿ ಬಿ.ಧರ್ಮಸಿಂಗ್, ಕಾಗೋಡು ತಿಮ್ಮಪ್ಪ ಮತ್ತು ಅಲ್ಪಸಂಖ್ಯಾತ ಸಮುದಾಯದ ಅಜಿತ್‌ಸೇಠ್, ಎಂ.ಯಾಹ್ಯ, ಯು.ಟಿ. ಷರೀಫ್ ಎಸ್.ಖಾನ್ ಮುಂತಾದವರು ಪ್ರಬುದ್ಧಮಾನಕ್ಕೆ ಬಂದರು.

ಮುಖ್ಯಮಂತ್ರಿಗಳಾಗಿ ದೇವರಾಜ್ ಅರಸರ ತಂದ ಅನೇಕ ಬದಲಾವಣೆಯ ಫಲವನ್ನು ಇಂದು ಹಿಂದುಳಿದ ವರ್ಗದವರು ಅನುಭವಿಸುತ್ತಿದ್ದಾರೆ ಬಲಿಷ್ಠ ಜಾತಿಗಳ ಅವಕೃಪೆಗೆ ಒಳಗಾದರೂ ಇವರು ಅದಕ್ಕೆ ಸೊಪ್ಪು ಹಾಕಲಿಲ್ಲ ಹುಟ್ಟಿನಿಂದ ಅರಸರು ಮೇಲು

ಸೇರಿದವರಾದರು ಶ್ರೀಸಾಮಾನ್ಯರಿಗೆ ನವ ಚೈತನ್ಯ ನೀಡಿ ವರ್ಗ–ವರ್ಣದ ನಡುವೆ ಇರುವ ಭಿನ್ನತೆಯನ್ನು ಹೋಗಲಾಡಿಸುವಲ್ಲಿ ಇವರು ಪಟ್ಟ ಶ್ರಮ ಸಾಮಾನ್ಯ ಸಂಗತಿಯಲ್ಲ. ಅಧಿಕಾರವನ್ನು ಸ್ವಂತಕ್ಕೆ ಬಳಸಿಕೊಳ್ಳಲಿಲ್ಲ. ಸುಮಾರು 8 ವರ್ಷಗಳ ಕಾಲ ಕರ್ನಾಟಕದ ಆಡಳಿತ ನಡೆಸಿದ ದೇವರಾಜ ಅರಸ್ ಆಗಿನ ಹಿತಮಿತವಾದ ಆರ್ಥಿಕ ವ್ಯವಸ್ಥೆಯನ್ನು ಬಳಸಿಕೊಂಡು ಹತ್ತಾರು ನೀರಾವರಿ ಯೋಜನೆಗಳು ಜಿಲ್ಲಾ ಕೇಂದ್ರಗಳಲ್ಲಿ ಸರ್ಕಾರಿ ಕಚೇರಿಗಳು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಿದ ನಿರ್ಮಾತೃ. ಮೇಲ್ವರ್ಗದಲ್ಲಿ ಹುಟ್ಟಿದ್ದ ದೇವರಾಜು ಅರಸರು ಜೀವನ ಪೂರ್ತಿ ಹಿಂದುಳಿದ ವರ್ಗಗಳ ಶ್ರೀಸಾಮಾನ್ಯರ ಆಶೋತ್ತರಗಳಿಗೆ ರೂಪ ನೀಡಿ ಬದಲಾವಣೆ ತಂದರು. ಅದೃಶ್ಯವಾಗಿ ಕಣ್ಣಿಗೆ ಕಾಣಿಸದ ಜಾತಿಗಳನ್ನು ಗುರುತಿಸಿ ಅವರುಗಳಿಗೆ ಶಕ್ತಿ ತುಂಬಿದ ಧೀಮಂತ.

ರಾಜ್ಯದಲ್ಲಿ ಜಾರಿಇದ್ದ ಮಲಹೊರುವಂತಹ ಹೀನ ಪದ್ಧತಿಯನ್ನು ನಿರ್ಮೂಲನೆ ಮಾಡಿದ್ದಲ್ಲದೆ ಸಮಾಜದಲ್ಲಿ ಗೌರವವಿಲ್ಲದೆ ಬದುಕುತ್ತಿದ್ದ ದಲಿತ ಸಮುದಾಯಗಳಿಗೆ ಧ್ವನಿಯಾದ ಅರಸರು ಸಮಾಜದಲ್ಲಿ ಮೇಲು ಕೀಳು ಎಂಬ ಅಸಮಾನತೆಯನ್ನು ತೊಲಗಿಸಲು ಪ್ರಯತ್ನಿಸಿದರು.

ಉಳುವವನಿಗೆ ಭೂಮಿ ಒಡೆತನದ ಶಾಸನ ಜಾರಿಗೆ ತಂದು ನಿರ್ಗತಿಕನಿಗೆ ಚೈತನ್ಯ ನೀಡಿ ಅದಕ್ಕೊಂದು ದಾರಿ ತೋರಿದರು. ಜಾತಿ ವ್ಯವಸ್ಥೆಯಲ್ಲಿನ ತಾರತಮ್ಯ ಹೋಗಲಾಡಿಸಲು ಕಟಬದ್ಧವಾದ ಅರಸರು ಅದಕ್ಕಾಗಿ ಮೇಲ್ವರ್ಗದವರನ್ನು ಎದುರು ಹಾಕಿಕೊಂಡು ಆಡಳಿತ ನಡೆಸಿದರು. ಹಲವಾರು ವರ್ಷಗಳಿಂದ ಕರ್ನಾಟಕ ಎಂದು ಹೆಸರಿಡಲು ಅನೇಕರು ಪ್ರಯತ್ನಿಸಿದರು ಅದು ಸಫಲವಾಗಲಿಲ್ಲ ಕೊನೆಗೆ ಅವರು ಮುಖ್ಯಮಂತ್ರಿ ಆದಾಗ ಮೈಸೂರು ಹೆಸರು ಅಳಿದು ಕರ್ನಾಟಕ ಎಂಬ ಹೆಸರು ಉದಯಿಸಿತು. ಇವರ ಪಕ್ಷದವರೇ ಹೆಸರಿನ ಬಗ್ಗೆ ತಕರಾರು ಮಾಡಿದರು.

ಅರಸರು ಪಟ್ಟು ಹಿಡಿದು ಕರ್ನಾಟಕ ಹೆಸರನ್ನು ಸ್ಥಿರಗೊಳಿಸಿದ್ದು ಒಂದು ಅಪೂರ್ವ ಸಾಧನೆಯೇ ಸರಿ. ಇಂದಿರಾಗಾಂಧಿ ರಾಜಕೀಯ ಶಕ್ತಿ ಕಳೆದುಕೊಂಡ ಸನ್ನಿವೇಶದಲ್ಲಿ ಅವರನ್ನು ಚಿಕ್ಕಮಗಳೂರು ಕ್ಷೇತ್ರದಿಂದ ನಿಲ್ಲಿಸಿ ಗೆಲ್ಲಿಸಿ ಲೋಕಸಭೆಗೆ ಕಳಿಸಿದ ಅರಸರು ಇಂದಿರಾಗಾಂಧಿಯ ಅವಕೃಪೆಗೆ ಒಳಗಾಗಿ ಕಾಂಗ್ರೆಸ್ ಬಿಟ್ಟು ಹೊಸ ಪಕ್ಷವನ್ನೇ ಕಟ್ಟಬೇಕಾಯಿತು ಕೊನೆಗಾಲದಲ್ಲಿ ದೈಹಿಕವಾಗಿ ಮಾನಸಿಕವಾಗಿ ತುಂಬಾ ನೊಂದುಕೊಂಡಿದ್ದರು.

ಇವರು ಬೆಳೆಸಿದ ವ್ಯಕ್ತಿಗಳಲ್ಲಿ ಕೆಲವರು ಬೆನ್ನಿಗೆ ಚೂರಿ ಹಾಕಿದ್ದರು. ಈ ಬ್ರೂಟಸ್ ರಾಜಕೀಯ ಇರಿತವನ್ನು ಇವರು ಸಹಿಸಿಕೊಳ್ಳಲಾರದಷ್ಟು ನಿತ್ರಾಣವಾದರು ಒಟ್ಟಿನಲ್ಲಿ ದೇವರಾಜ ಅರಸರು ಒಂದು ರೀತಿಯಲ್ಲಿ ಅಜಾನುಬಾಹು ದೇಹದಲ್ಲಿ ಮತ್ತು ಮನಸ್ಸಿನಲ್ಲಿ.

## ಕೇಂದ್ರ ಸಹಕಾರ ನಿಬಂಧಕರಾಗಿ ರವೀಂದ್ರ ಕುಮಾರ್ ಅಗರ್ವಾಲ್ ನೇಮಕ



Shri. Rabindra Kumar Agarwal IAS

ರವೀಂದ್ರ ಕುಮಾರ್ ಅಗರ್ವಾಲ್, ಕೇರಳ ಕೇಡರ್ 1997ರ ಬ್ಯಾಚ್ ಐಎಎಸ್ ಅಧಿಕಾರಿ, ಕೇಂದ್ರ ಸಹಕಾರ ಸಚಿವಾಲಯದಲ್ಲಿ ಸಹಕಾರ ಸಂಘಗಳ ಹೊಸ ಕೇಂದ್ರೀಯ ರಿಜಿಸ್ಟ್ರಾರ್ ಆಗಿ ನೇಮಕಗೊಂಡಿದ್ದಾರೆ.

ಅಗರ್ವಾಲ್ ಅಲ್ಪಾವಧಿಗೆ ಇದ್ದ ಅರಣ್ಯ ಅಧಿಕಾರಿ ಆನಂದ್ ಕುಮಾರ್ ಝಾ ಅವರನ್ನು ಬದಲಿಸುತ್ತಾರೆ. ಅಗರ್ವಾಲ್ ಅವರು ದೆಹಲಿಯಲ್ಲಿ ಹೊಸದಾಗಿ ನಿರ್ಮಿಸಲಾದ ಕಚೇರಿಯಲ್ಲಿ ಹೊಸ CRCS (Central register of cooperative societies) ಆಗಿ ಅಧಿಕಾರ ವಹಿಸಿಕೊಂಡರು. ಅಗರವಾಲ್ ಅವರು ಹೆಚ್ಚುವರಿ ಕಾರ್ಯದರ್ಶಿಯಾಗಿ ಆಗಸ್ಟ್ ಮೊದಲ ವಾರದಲ್ಲಿ ಸಹಕಾರ ಸಚಿವಾಲಯವನ್ನು ಸೇರಿದ್ದು ಈಗ ಅವರು ಕೇಂದ್ರೀಯ ರಿಜಿಸ್ಟ್ರಾರ್ ಆಗಿ ಅಧಿಕಾರ ವಹಿಸಿಕೊಂಡರು, ಇದು ದೇಶದಲ್ಲಿ ಬಹು ರಾಜ್ಯ ಸಹಕಾರ ಸಂಘಗಳ ಬೆಳವಣಿಗೆಗೆ ಪ್ರಮುಖವಾಗಿದೆ. ಹೊಸ CRCS ಗಣಿತಶಾಸ್ತ್ರದಲ್ಲಿ ಪದವಿ ಮತ್ತು ದೆಹಲಿ ವಿಶ್ವವಿದ್ಯಾಲಯದಿಂದ ಕಾರ್ಯಾಚರಣೆ ಸಂಶೋಧನೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿದ್ದು ಅವರು 1999ರಲ್ಲಿ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಆಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು ಮತ್ತು 2001ರಲ್ಲಿ ಕೇರಳದ ಪ್ರವಾಸೋದ್ಯಮ ಇಲಾಖೆಯಲ್ಲಿ ಹೆಚ್ಚುವರಿ ನಿರ್ದೇಶಕರಾದರು.

ಅಗರ್ವಾಲ್ ಅವರು ಕೆಲವು ಕಾಲ ಬೇಕಲ್ ರೆಸಾರ್ಟ್ಸ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರೂ ಆಗಿದ್ದರು. ನಗರಾಡಳಿತ ಮತ್ತು ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಣಕಾಸು ಮತ್ತು ಜಲಸಂಪನ್ಮೂಲ ಇಲಾಖೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ಕೇರಳದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತರಾಗಿ ಮತ್ತು ಕೇರಳ ಸರ್ಕಾರದ ಹಣಕಾಸು ಸಂಪನ್ಮೂಲಗಳ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಅಗರ್ವಾಲ್ ಅವರ ನೇತೃತ್ವದಲ್ಲಿ ದೇಶದ ಸಹಕಾರಿಗಳಿಗೆ ಒಂದು ಒಳ್ಳೆಯ ಆಡಳಿತ ದೊರೆಯುವುದೆಂದು ಪತ್ತಿನ ಮಂಡಳದ ನಿರ್ದೇಶಕರಾದರಾದ ಡಾ. ಸಂಜಯ ಪಂಚಾಕ್ಷರಿ ಹೊಸಮಠ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರು ಉಪಾಧ್ಯಕ್ಷರು, ಆಡಳಿತಮಂಡಳಿ ಸದಸ್ಯರು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸಿಬ್ಬಂದಿಯವರು ಅಗರ್ವಾಲ್ ಅವರ ನೇಮಕವನ್ನು ಸ್ವಾಗತಿಸಿ ಅಭಿನಂದಿಸಿದರು.

# ಸದಸ್ಯರಲ್ಲಿ ಮಿತವ್ಯಯ, ಉಳಿತಾಯ, ಸ್ವಾವಲಂಬನೆಗೆ ಸ್ಫೂರ್ತಿ...
# ಪ್ರಗತಿಯಲ್ಲಿ ವಿಶ್ವಬಂಧು ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಚಿತ್ರದುರ್ಗ

ಭಾರತದಲ್ಲಿ ಸಹಕಾರ ಚಳವಳಿ ಆರಂಭವಾದುದ್ದೇ ರೈತರಿಗೆ ಸಹಕಾರ ಸಂಘಗಳ ಮೂಲಕ ಕೃಷಿ ಸಾಲಗಳನ್ನು ನೀಡಿ. ಲೇವಾದೇವಿದಾರರಿಂದ ಆಗುತ್ತಿದ್ದ ಶೋಷಣೆಯಿಂದ ಅವರನ್ನು ಮುಕ್ತಿಗೊಳಿಸಬೇಕೆಂಬ ಉದ್ದೇಶದಿಂದ. ಹೀಗಾಗಿ, ಸಹಕಾರ ಚಳವಳಿಯ ಆರಂಭದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಕ್ರಮೇಣ ಪತ್ತಿನ ಸಹಕಾರ ಚಳವಳಿ ಕ್ರಿಯಾಶೀಲವಾಗತೊಡಗಿತ್ತು.

ಕೃಷಿಯೇತರ ಪತ್ತಿನ ಸಂಘಗಳು ಎಂದರೆ, ಕೃಷಿ ಹೊರತಾದ ಉದ್ದೇಶಗಳಿಗೆ ಸಾಲ ಸೌಲಭ್ಯಗಳನ್ನು ನೀಡುವ ಸಹಕಾರ ಸಂಘಗಳು, ಅವುಗಳು ಪ್ರಾಥಮಿಕ ಸಹಕಾರ ಸಂಸ್ಥೆಗಳಾಗಿರುತ್ತವೆ. ಅಂದರೆ, ಇವುಗಳಲ್ಲಿ ವ್ಯಕ್ತಿಗತ ಸದಸ್ಯತ್ವಕ್ಕೆ ಮಾತ್ರ ಅವಕಾಶವಿರುತ್ತದೆ. ಇಂತಹ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಸ್ಥಾಪನೆಗೆ ಚಳವಳಿ ಆರಂಭದಲ್ಲಿ ಉತ್ತೇಜನ ದೊರೆಯದಿದ್ದರೂ, ತದನಂತರದ ವರ್ಷಗಳಲ್ಲಿ ಪ್ರೋತ್ಸಾಹದೊರೆತಿರುತ್ತದೆ. ಇವು ಗ್ರಾಮೀಣ ಮತ್ತು ಪಟ್ಟಣ, ನಗರ ಪ್ರದೇಶಗಳಲ್ಲಿ ಸದಸ್ಯರ ಆರ್ಥಿಕ ಅಗತ್ಯಗಳನ್ನು ಪೂರೈಸುವಲ್ಲಿ ಪರಿಣಾಮಕಾರಿ ಸೇವೆಸಲ್ಲಿಸುತ್ತಿದೆ.

ಚಿತ್ರದುರ್ಗ ಜಿಲ್ಲೆ ಹಲವು ದಶಕಗಳ ಹಿಂದೆ ತೀರಾ ಹಿಂದುಳಿಂದ ಜಿಲ್ಲೆಯಾಗಿತ್ತು. ಕ್ರಮೇಣ ಅಲ್ಲಿನ ಜನರ ಸ್ಥಿತಿಗತಿಗಳು ಬದಲಾಗುತ್ತಾ ಬಂದವು. ಆರ್ಥಿಕವಾಗಿ ಅಬಲರಾದ ಜನರನ್ನು ಸಹಕಾರ ಕ್ಷೇತ್ರ ಸ್ವಾವಲಂಬಿ ಮಾಡಬಲ್ಲದು ಎಂಬ ಆಶಯವಿದ್ದ ಕಾರಣ. ಸಮಾಜದ ಹಿರಿಯ ವ್ಯಕ್ತಿಗಳ ಆರ್ಥಿಕ ಪರಿಸ್ಥಿತಿಯನ್ನು ಮನಗಂಡು. ಅಂದಿನ ಸಮಾಜದಲ್ಲಿನ ಮುಖಂಡರು ಮತ್ತು ಅನುಭವಿಗಳು ಒಟ್ಟಾಗಿ ಸೇರಿ ಚರ್ಚಿಸಿ ಪತ್ತಿನ ಸಹಕಾರ ಸಂಘ ಸ್ಥಾಪಿಸಬೇಕೆಂಬ ಆಶಯದೊಂದಿಗೆ. ನಿವೃತ್ತ ಸಹಕಾರ ಸಂಘಗಳ ಉಪನಿಬಂಧಕರಾದ ಹೆಚ್. ರಾಮಪ್ಪನವರ ನೇತೃತ್ವದಲ್ಲಿ ಸಲಹೆ, ಮಾರ್ಗದರ್ಶನ ಪಡೆದರು.

ನಂತರ, ಸಹಕಾರ ಇಲಾಖೆ ನಿಯಮದಂತೆ ಚಿತ್ರದುರ್ಗ ನಗರದ ರಂಗಯ್ಯನ ಬಾಗಿಲು ಬಳಿ ಇರುವ ಎಸ್.ಟಿ.ಜೆ.ಜನರಲ್ ಹಾಸ್ಟೆಲ್ ಬಿಲ್ಡಿಂಗ್‌ನಲ್ಲಿ ಅಂದಿನ ಹಾಸ್ಟೆಲ್‌ನ ಗೌರವ ಕಾರ್ಯದರ್ಶಿಗಳಾಗಿದ್ದ ಜಿ.ಬಿ. ದ್ಯಾಮಣ್ಣನವರ ಸಹಕಾರದಿಂದ ಸ್ಥಳ ನಿಗದಿ ಮಾಡಿ ಸಮಾಜದ ಹಿರಿಯರಾದ ಎಂ. ಬಿ.ಸಿ. ಗೌಡರು ಮತ್ತು ಜಿ. ಶರಣಪ್ಪ ಮತ್ತು ಸಿಂಗಾಪುರದ ಕಲಿವೀರಪ್ಪ ಸೇರಿದಂತೆ ಅನೇಕ ಮುಖಂಡರ ಮುಂದಾಳತ್ವದಲ್ಲಿ ಸೊಸೈಟಿಯನ್ನು ದಿನಾಂಕ: 9–4–1991ರಂದು ಸ್ಥಾಪಿಸಲಾಯಿತು. ಕಾಲಕ್ರಮೇಣ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರ ಪಿಗ್ಮಿ ಏಜೆಂಟರು ಸೊಸೈಟಿಯ ಅಭಿವೃದ್ಧಿಗೆ ಉತ್ತಮ ಸೇವೆಯನ್ನು ಕೈಗೊಂಡಿದ್ದರ ಫಲವಾಗಿ ಪ್ರಗತಿ ಸಾಧಿಸುತ್ತಾ ಸದಸ್ಯ ಸೇವೆಗಳಲ್ಲಿ ತೊಡಗಿದೆ.

ವಿಶ್ವಬಂಧು ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಚಿತ್ರದುರ್ಗ ಪ್ರಸ್ತುತ 33ನೇ ವರ್ಷ ಪೂರೈಸಿದ್ದು ಪ್ರಗತಿಯಲ್ಲಿ



ಮುನ್ನಡೆಯುತ್ತಿದೆ ಮತ್ತು ಸದಸ್ಯರಲ್ಲಿ ಮಿತವ್ಯಯ, ಉಳಿತಾಯ ಸ್ವಾಲಂಬನೆಗೆ ಸ್ಫೂರ್ತಿಯಾಗಿ ಕಾರ್ಯನಿರ್ವಹಿಸುತ್ತಿದೆ.

**ಸೌಲಭ್ಯಗಳು :** ಠೇವಣಿ ಸೌಲಭ್ಯ ನೀಡುವುದು. ಸಂಘದಲ್ಲಿ ರೂ. 1ಲಕ್ಷದವರೆಗೆ ಅಪಘಾತ ವಿಮಾ ಯೋಜನೆ ಅಡಿ ಎಲ್ಲಾ ಸದಸ್ಯರನ್ನು ಒಳಪಡಿಸಲಾಗಿದೆ. ಸಂಘದ ಸದಸ್ಯರಿಗೆ ಅನುಕೂಲವಾಗುವಂತೆ ಸದಸ್ಯರ ಮರಣೋತ್ತರ ನಿಧಿಯಿಂದ ಮೃತ ಸದಸ್ಯರ ವಾರಸುದಾರರಿಗೆ ರೂ. 5000ಗಳನ್ನು ನೀಡಲಾಗುತ್ತಿದೆ. ಎಸ್. ಎಸ್. ಎಲ್. ಸಿ. ಮತ್ತು ದ್ವಿತೀಯ ಪಿ. ಯು. ಸಿ.ಯಲ್ಲಿ ಅತಿಹೆಚ್ಚು ಅಂಕ ಪಡೆದು ತೇರ್ಗಡೆಯಾದ ಸದಸ್ಯರ ಮಕ್ಕಳಿಗೆ ತಲಾ ಮೂರು ವಿದ್ಯಾರ್ಥಿಗಳಿಗೆ ಪ್ರಶಸ್ತಿಯೊಂದಿಗೆ ಪ್ರತಿಭಾ ಪುರಸ್ಕರ ನೀಡಿ ಗೌರವಿಸಲಾಗುತ್ತದೆ.

ಪ್ರಸ್ತುತ ಸಂಘದ ಅಧ್ಯಕ್ಷರಾದ ಜಿ.ಬಿ ತೀರ್ಥಪ್ಪ ರವರು ಆಡಳಿತ ಮಂಡಳಿ ಸಹಕಾರದೊಂದಿಗೆ ಸಂಘದ ಬೆಳವಣಿಗೆಗೆ ಬದ್ಧತೆಯ ಮಾರ್ಗದರ್ಶನ ನೀಡುತ್ತಿದ್ದಾರೆ. ವಿಶ್ವಬಂಧು ಅರ್ಬನ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ದಿನಾಂಕ :31–3–2024 ರ ವರ್ಷಾಂತ್ಯಕ್ಕೆಒಟ್ಟು 1264 ಜನ ಸದಸ್ಯರಿದ್ದು, ಷೇರು ಬಂಡವಾಳ 37,89,510 ರೂ. ಗಳಿರುತ್ತದೆ. ಒಟ್ಟು ಠೇವಣಿಗಳ ರೂ. 4,95,83,490ಒಟ್ಟು ನಿವ್ವಳ ಲಾಭ ರೂ. 40,46,857.80 ಗಮನಾರ್ಹ ರೀತಿ ಲಾಭಗಳಿಸಿರುತ್ತದೆ.

**ಸಂಘದ ವರ್ಷವಾರು ಪ್ರಗತಿಯ ಪಕ್ಷಿನೋಟ**

| ವಿವರ | 2020–21 | 2021–22 | 2022–23 | 2023–24 |
|---|---|---|---|---|
| ಸದಸ್ಯತ್ವ | 1257 | 1257 | 1264 | 1274 |
| ಷೇರು ಬಂಡವಾಳ ರೂ. | 6636100 | 5466100 | 453500 | 3789510 |
| ಠೇವಣಿಗಳು ರೂ. | 33420263 | 37702954 | 39401867 | 4,95,83,490 |
| ಆಪದ್ಧನ ನಿಧಿ ರೂ. | 8631009 | 9481432 | 10535851 | 11850676 |
| ಇತರೆ ನಿಧಿಗಳು ರೂ. | 9573100 | 10349904 | 11796315 | 13106730 |
| ನಿವ್ವಳ ಲಾಭಾಂಶ ರೂ. | 2652517 | 3368987 | 3635740 | 4046857 |
| ಲಾಭಾಂಶ ಹಂಚಿಕೆ | 18% | 25% | 25% | 25% |

# ಅತಿ ಶೀಘ್ರದಲ್ಲಿ ರಾಷ್ಟ್ರೀಯ ಸಹಕಾರ ನೀತಿ ಜಾರಿಗೆ... ಸುರೇಶ್ ಪ್ರಭು




**ಬೆಳಗಾವಿ :** ಬೆಳಗಾವಿಯ ಒಂದು ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಕೇಂದ್ರದ ಮಾಜಿ ಸಚಿವ ಹಾಗೂ ರಾಷ್ಟ್ರೀಯ ಸಹಕಾರ ನೀತಿ ಸಮಿತಿಯ ಅಧ್ಯಕ್ಷರು ಆದ ಸನ್ಮಾನ್ಯ ಶ್ರೀ ಸುರೇಶ್ ಪ್ರಭು ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ ಕೇಂದ್ರ ಸರ್ಕಾರದ ಈ ಸಮಿತಿಯು ಭಾರತದ ಸಹಕಾರ ಚಳುವಳಿ ಮತ್ತು ದೇಶದ ಎಲ್ಲ ಸಹಕಾರಿಗಳ ಒಳಗೊಂಡಂತೆ ಸಹಕಾರ ನೀತಿಗಳನ್ನು ಸರಳೀಕರಣ ಹಾಗೂ ಸ್ಪಷ್ಟೀಕರಣಗೊಳಿಸುವಲ್ಲಿ ಮತ್ತು ಸಾಕಷ್ಟು ವಿವಿಧ ರೀತಿಯ ಹೊಸ ಬಗೆಯ ಸಹಕಾರಿ ಯೋಜನೆಗಳನ್ನು ಜನಸಾಮಾನ್ಯರಿಗೆ ಒಳಿತಾಗುವ ರೀತಿಯಲ್ಲಿ ಜೊತೆಗೆ ಸಾಮೂಹಿಕ ಸಹಕಾರ ಕಾಯ್ದೆಯನ್ನು ಜಾರಿಗೆ ತರುವುದಕ್ಕೋಸ್ಕರ ತನ್ನ ಒಂದು ವರ್ಷ ಸುಧೀರ್ಘವಾದ ಸಂಶೋಧನೆ ನಡೆಸಿದ ವರದಿಯನ್ನು ಸಮಿತಿಯು ರಾಷ್ಟ್ರೀಯ ಸಹಕಾರ ಸಚಿವಾಲಯಕ್ಕೆ ಈಗಾಗಲೇ ಒಪ್ಪಿಸಲಾಗಿದೆ ಶೀಘ್ರದಲ್ಲೇ ಕೇಂದ್ರ ಸಹಕಾರ ಮಂತ್ರಿಗಳಾದ ಸನ್ಮಾನ್ಯ ಶ್ರೀ ಅಮಿತ್ ಶಾ ಜೀ ಅವರು ಅದನ್ನು ಲೋಕಾರ್ಪಣೆ ಮಾಡಲಿದ್ದಾರೆಂದು ತಿಳಿಸಿದರು.

ಬೆಳಗಾವಿಯ ಸುಪ್ರಸಿದ್ಧ ದೈವಜ್ಞ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನ ಸ್ವರ್ಣ ಮಹೋತ್ಸವದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ದೆಹಲಿಯಿಂದ ಆಗಮಿಸಿದ್ದ ಸನ್ಮಾನ್ಯ ಶ್ರೀ ಸುರೇಶ್ ಪ್ರಭು ಅವರನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿರ್ದೇಶಕರಾದ ಡಾ. ಸಂಜಯ್ ಪಂಚಾಕ್ಷರಿ ಹೊಸಮಠರವರು ಅವರನ್ನು ಭೇಟಿಯಾಗಿ ರಾಜ್ಯದಲ್ಲಿನ ಪತ್ತಿನ ಸಹಕಾರ ಸಂಘಗಳ ಬಗ್ಗೆ ಚಿಂತನ ಮಂಥನ ನಡೆಸಿದ್ದು ಗಮನಾರ್ಹ.

ರಾಜ್ಯದಲ್ಲಿನ ಪತ್ತಿನ ಸಹಕಾರ ಸಂಘಗಳಿಗೆ ಕೇಂದ್ರ ಸರ್ಕಾರದಿಂದ ಕೆಲವೊಂದಿಷ್ಟು ರಿಯಾಯಿತಿಗಳು ಒದಗಬೇಕಾಗಿದ್ದು ಅವು Income Tax ವಿಷಯವಾಗಿರಬಹುದು GST ವಿಷಯವಾಗಿರಬಹುದು CONSUMER COURT (Regarding violation of article 14 and 21 of Indian constitution on Board of Directors and office bearers of Co-operative society due to the impugned orders of CONSUMER commissions and therefore the Suggestions/Request for propose amendments in Karnataka cooperative Society act 1959 more specifically to bar the jurisdiction of CONSUMER commissions.)

ಪತ್ತಿನ ಸಹಕಾರ ಸಂಘಗಳ ಇನ್ನು ಹಲವಾರು ಸಮಸ್ಯೆಗಳಿಗೆ ಕೇಂದ್ರ ಸರ್ಕಾರದ ಮಧ್ಯಸ್ಥಿಕೆ ಕುರಿತು ಚರ್ಚಿಸಲಾಗಿ ಅವರು ಈ ವಿಷಯಗಳ ಬಗ್ಗೆ ಚಿಂತನ ಮಂಥನ ನಡೆಸಲು ಒಂದು ದಿನ ವಿಶೇಷವಾಗಿ ರಾಜ್ಯದ ಪತ್ತಿನ ಸಂಘಗಳನ್ನು ಉದ್ದೇಶಿಸಿ ಮಾತನಾಡಲು ಆದಷ್ಟು ಬೇಗ ಬರುವುದಾಗಿ ತಿಳಿಸಿದರು ಮತ್ತು ಈ ಸಮಸ್ಯೆಗಳನ್ನು ನಿವಾರಿಸುವಲ್ಲಿ ಈಗಾಗಲೇ ಕೇಂದ್ರ ಸರ್ಕಾರ ಚಿಂತನ ಮಂಥನ ನಡೆಸುತ್ತಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಮಾಡುತ್ತಿರುವ ಕಾರ್ಯ ಚಟುವಟಿಕೆಗಳನ್ನು ಪ್ರಶಂಶಿಸಿದರು. ಡಾ॥ ಸಂಜಯ ಪಿ ಹೊಸಮಠರವರು ಪತ್ತಿನ ಮಹಾಮಂಡಳದ ಪರವಾಗಿ ಸನ್ಮಾನ್ಯ ಶ್ರೀ ಸುರೇಶ್ ಪ್ರಭು ಅವರನ್ನು ಸತ್ಕರಿಸಿ ಗೌರವಿಸಿದರು. ವೇದಿಕೆಯ ಮೇಲೆ ದೈವಜ್ಞ ಕೋ ಆಪರೇಟಿವ್ ಬ್ಯಾಂಕಿನ ಎಲ್ಲಾ ದೀರ್ಘದರ್ಶಕ ಮಂಡಳಿಯವರು ಹಾಜರಿದ್ದರು.